

# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

Volume : 07 Issue : 234 Tuesday 27-05-2025 E-mail : maruti.b.hosamani76@gmail.com Page: 4 Price : Rs. 1/-


# ಬದುಕಲು ಕಲಿಸುವುದೇ ವಿದ್ಯಾರ್ಥಿ ಜೀವನ – ಸಂಗಮೇಶ ಬಬಲೇಶ್ವರ

**ಸಿಹಿ ಕಹಿ ಸುದ್ದಿ,**
**ವಿಜಯಪುರ :** ಶಿಕ್ಷಣ ದಿಂದ ಸಿಗುವ ಜ್ಞಾನಾರ್ಜನೆಯು ಪ್ರತಿಯೊಬ್ಬರ ಆಸ್ತಿ. ವಿದ್ಯಾರ್ಥಿ ಬದುಕೆಂಬುದು ವ್ಯಕ್ತಿಯ ವ್ಯಕ್ತಿತ್ವವನ್ನು ರೂಪಿಸುವ ಕ್ರಿಯಾಶೀಲ ಅವಧಿ. ಇದು ಮಕ್ಕಳ ಮೌಲ್ಯಾತ್ಮಕ ವ್ಯಕ್ತಿತ್ವ ರೂಪಿಸುವ ಕಾಲಘಟ್ಟವಾಗಿದೆ ಎಂದು ಕರ್ನಾಟಕ ಬಾಲ ವಿಕಾಸ ಅಕಾಡೆಮಿ ಅಧ್ಯಕ್ಷ ಸಂಗಮೇಶ ಬಬಲೇಶ್ವರ ಹೇಳಿದರು.

ಸೋಮವಾರ ದಂದು ನಗರದ ಕಾಳಿಕಾ ಮಂದಿರದಲ್ಲಿ
ಉನ್ನತಿ ವಿದ್ಯಾ ವರ್ಧಕ ಸಂಘದ ವತಿಯಿಂದ ಉನ್ನತಿ ಕೋಚಿಂಗ್ ಕ್ಲಾಸಿನ ಸಮಾರೋಪ ಹಾಗೂ ನಿರಂತರ ತರಬೇತಿಯ ಪ್ರಾರಂಭೋತ್ಸವವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಇಂದಿನ ಮಕ್ಕಳಿಗೆ ಮೌಲ್ಯಾಧಾರಿತ ಶಿಕ್ಷಣದ ಜತೆಗೆ ಒಳ್ಳೆಯ ಸಂಸ್ಕಾರ ನೀಡುವುದು ತಂದೆ ತಾಯಿಗಳ ಮುಖ್ಯ ಆದ್ಯತೆ ಯಾಗಬೇಕು ಎಂದು ಹೇಳಿದರು.

ಶಿಕ್ಷಕ ಸಾಹಿತಿ ಸಂತೋಷ ಬಂಡೆ ಮಾತನಾಡಿ, ಮಕ್ಕಳು
ಶ್ರಮ ವಹಿಸಿ ಅಧ್ಯಯನ ಮಾಡುವ ಪ್ರವೃತ್ತಿಯನ್ನು ರೂಢಿಸಿ ಕೊಳ್ಳುವ ಜೊತೆಗೆ ಸ್ವಾವಲಂಬಿ ಬದುಕಿಗೆ ಅಗತ್ಯವಾದ ಮಾನವೀಯ ಮೌಲ್ಯ ಮತ್ತು ಜೀವನ ಕೌಶಲ್ಯ ಬೆಳೆಸಿ ಕೊಂಡು ದೇಶದ ಉತ್ತಮ ಪ್ರಜೆಗಳಾಗ ಬೇಕು ಎಂದು ಹೇಳಿದರು.



ಶಿಕ್ಷಕ ಸಾಹಿತಿ ಆರ್.ಎಸ್ ಪಟ್ಟಣಶೆಟ್ಟಿ ಮಾತನಾಡಿ, ಮಕ್ಕಳಿಗೆ ಆಚಾರ, ವಿಚಾರ ಕಲಿಸಿ ಉತ್ತಮ ಸಂಸ್ಕಾರ ನೀಡುವ ಜತೆಗೆ ಅಕ್ಷರಾಭ್ಯಾಸ ಮಾಡಲು ಮನೆಯಲ್ಲಿ ಉತ್ತಮ ವಾತಾವರಣ ಕಲ್ಪಿಸಬೇಕು. ಪಾಲಕರ ಪ್ರೀತಿ, ಗುರು ವೃಂದದ ಮಾರ್ಗದರ್ಶನ, ವಿದ್ಯಾರ್ಥಿಗಳ ನಿರಂತರ ಪರಿಶ್ರಮ ದಿಂದ ಖಂಡಿತ ಗುರಿ ತಲುಪಲು ಸಾಧ್ಯ ಎಂದು ಹೇಳಿದರು.

ವ್ಯವಸ್ಥಾಪಕ ನಿರ್ದೇಶಕ ಸುನೀಲಕುಮಾರ ಅತನೂರ ಮಾತನಾಡಿ, ತಾಯಂದಿರು ತಮ್ಮ ಮಕ್ಕಳಿಗೆ ಸಾಮರಸ್ಯ, ಸ್ನೇಹ, ಹೊಂದಾಣಿಕೆ, ಪ್ರಾಮಾಣಿಕತೆಯನ್ನು ಚಿಕ್ಕಂದಿನಿಂದಲೇ ಕಲಿಸಬೇಕು ಎಂದರು. ಉನ್ನತಿ ವಿದ್ಯಾ ವರ್ಧಕ ಸಂಘದ ಅಧ್ಯಕ್ಷ ಸಂಗಣ್ಣ ಅತನೂರ ಅಧ್ಯಕ್ಷತೆ ವಹಿಸಿದ್ದರು. ಇಂಡಿ ಯುವ ಧುರೀಣ ಮಂಜುನಾಥ ಕಾಮಗೊಂಡ ಸರಸ್ವತಿ ಫೋಟೋ ಪೂಜೆ ಸಲ್ಲಿಸಿ ಮಾತನಾಡಿದರು. ಹೆಸ್ಕಾಂ ನಿವೃತ್ತ ಹಿರಿಯ ಅಭಿಯಂತರರಾದ ಪುರುಷೋತ್ತಮ ಗಲಗಲಿ ಸಸಿಗೆ ನಿರೂಣಿಸಿದರು.

ಈರಯ್ಯ ಮಠಪತಿ ಸಾನಿಧ್ಯ ವಹಿಸಿದ್ದರು. ಕೋಚಿಂಗ್ ಕ್ಲಾಸಿಸ್ ಮಾರ್ಗದರ್ಶಕರಾದ ಪ್ರಕಾಶ ಬೇನೂರ, ಶಿಕ್ಷಕ ಷಣ್ಮುಖ ಕಲಶೆಟ್ಟಿ, ಶಿಕ್ಷಣ ಪ್ರೇಮಿಗಳಾದ ರಾಜುಗೌಡ, ಗುರಪ್ಪ ಅವಟಿ, ಸುರೇಶ ಕೌಲಗಿ, ಸಂಸ್ಥಾಪಕ ಕಾರ್ಯದರ್ಶಿ ಮಲ್ಲಿಕಾರ್ಜುನ ಅತನೂರ, ಉಪಾಧ್ಯಕ್ಷ ಮಹೇಶ ಬೇನೂರ, ಓಂಕಾರ ನಾವಿ ಬಸವರಾಜ ಲಾಳಸಂಗಿ ಸೇರಿದಂತೆ ಶಿಕ್ಷಕರು, ಮಕ್ಕಳು, ಪಾಲಕರು, ತಾಯಂದಿರು ಭಾಗವಹಿಸಿದ್ದರು.

## "ಚುಂಬಕ ಗಾಳಿ"




**ಸೂರ್ಯ ಚಂದ್ರ ಬೆಳಗುವ ಬೆಳಕಲಿ**
**ಭೂತಾಯಿ ಒಡಲ ಮುತ್ತಿನ ತೆನೆಗೆ**
**ಅನ್ನದಾತನ ಶ್ರಮದ ಬೆವರ ಬೆಳೆಗೆ**
**ಜಗದಲಿ ಸುತ್ತಿ ಸುಳಿವ ಜೀವನ ಕಳೆ**

**ಭೂಮಿ ಆಗಸ ಒಂದಾಗಿಸುವ ತಂಗಾಳಿ**
**ಕೋಗಿಲೆಗಳ ಗಾನ ಸುನಾದ ಲಹರಿ**
**ನವಿಲುಗಳ ಚಂದದ ನೃತ್ಯದ ಸುವ್ವಾಲಿ**
**ಸಕಲ ಜೀವರಾಶಿಗಳ ನಿತ್ಯ ಬಾಳ್ವೇಗೆ**

**ನವ ಜೋಡಿ ಪ್ರೇಮಿಗಳ ವಿಲಾಸಿ ನಗೆಗೆ**
**ನಿತ್ಯ ಜೀವನದ ಹರುಷದ ಹೊಳಪು**
**ಹೂವು ಲತೆಗಳ ಬಳಕಲು ಒನಪು**
**ವಾರಿಧಿ ತೆರೆಗಳ ಅಂದವು ಚುಂಬಕ ಗಾಳಿ**

**– ಶ್ರೀದೇಶಂಸು**
**ಶ್ರೀಸುರೇಶ ಶಂಕ್ರೆಪ್ಪ ಅಂಗಡಿ**
**ದೇವರ ಹಿಪ್ಪರಗಿ.**

# ಹಾಲುಮತದ ಮೂಲ ಪೀಠ, ಶ್ರೀಮದ ಜಗದ್ಗುರು ಅಮೋಘ: ಸಿದ್ದೇಶ್ವರ ಜಾತ್ರಾ ಮಹೋತ್ಸವ

**ಸಿಹಿ ಕಹಿ ಸುದ್ದಿ,**
**ಸಿದ್ದಾಪುರ:** ಮುದ್ದೇಬಿಹಾಳ ತಾಲೂಕಿನ ಸಿದ್ದಾಪುರ ಪಿ.ಟಿ ಗ್ರಾಮದಲ್ಲಿ ಪ್ರತಿ ವರ್ಷದಂತೆ ಈ ವರ್ಷವೂ ಶ್ರೀಮದ ಜಗದ್ಗುರು ಶ್ರೀ ಅಮೋಘ ಸಿದ್ದೇಶ್ವರ ಜಾತ್ರೆ ಜರಗುವುದು. ಮೇ 26 ಸೋಮವಾರ ದಂದು ಮುಂಜಾನೆ 7.00 ಗಂಟೆಗೆ ತೋನಸ್ಯಾಳ ಗ್ರಾಮದಿಂದ ಆಗಮಿಸಿದ ದೇವರನ್ನು ಸಕಲವಾದ್ಯ ವೈಭವಗಳೊಂದಿಗೆ ಹಾಗೂ ಸುಮಂಗಲಿಯರ ಕುಂಭ ಮೇಳದೊಂದಿಗೆ ಬರಮಾಡಿ ಕೊಳ್ಳುವುದು. ನಂತರ ಶ್ರೀ ಅಮೋಘ ಸಿದ್ದೇಶ್ವರ ಗದ್ದುಗೆ ಮೇಲೆ ಪ್ರತಿಷ್ಠಾಪಿಸುವದು. ಅಂದೇ ರಾತ್ರಿ 9:00 ಗಂಟೆಗೆ ಸ್ವರ ಸಿಂಚನ ಮತ್ತು ವಿರಾಟ ವೇದಾಂತ ಮೆಲೋಡಿಸ್ ಆರ್ಕೆಸ್ಟ್ ಮುದ್ದೇಬಿಹಾಳ ಇವರಿಂದ. ನೃತ್ಯ ಹಾಸ್ಯ ರಸಮಂಜರಿ ಕಾರ್ಯಕ್ರಮ ಜರುಗುವುದು. ಅಂದೇ ರಾತ್ರಿ 10. ಗಂಟೆಗೆ ಸುಪ್ರಸಿದ್ಧ ಡೊಳ್ಳಿನ ಪದಗಳು ನಡೆಯುತ್ತವೆ. ಮೇ 27 ಮಂಗಳವಾರ ದಂದು ಮುಂಜಾನೆ 7.00 ಗಂಟೆಗೆ ಶ್ರೀ ಅಮೋಘ ಸಿದ್ದೇಶ್ವರ ಮೂರ್ತಿಗೆ



ಮಹಾಭಿಷೇಕ. ನಂತರ ಶ್ರೀ ಶ್ರೀ ಶ್ರೀ ಶ್ರೋ. ಬ್ರ.ನಿ.ಸ ಸಿದ್ದರತ್ನ ಮದ ಗೊಂಡೇಶ್ವರ ಮಹಾರಾಜರ 15 ನೇ. ಪುಣ್ಯಾರಾಧನೆ. ಮಧ್ಯಾಹ್ನ 3 ಗಂಟೆಗೆ ಸಕಲ ವಾದ್ಯ ವೈಭವಗಳೊಂದಿಗೆ ಮತ್ತು ಸಾರವಾಡದ ಗೊಂಬೆ ಹಾಗೂ ಡಿಜೆ ಸೌಂಡ್ ಸಿಸ್ಟಮ್ ದೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಶ್ರೀ ಅಮೋಘ ಸಿದ್ದೇಶ್ವರ ಭಾವಚಿತ್ರ ಮೆರವಣಿಗೆ. ಅಂದೇ ರಾತ್ರಿ 10 ಗಂಟೆಗೆ ಸುತ್ತ ಮುತ್ತಲಿನ ಗ್ರಾಮಗಳ ಸದ್ಭಕ್ತರಿಂದ ಸುಪ್ರಸಿದ್ಧ ಡೊಳ್ಳಿನ ಪದಗಳು ಹಾಗೂ ಡೊಳ್ಳಿನ ಓಲಗ. ಅಂದೇ ನಸುಕಿನ 4. ಗಂಟೆಗೆ ಶಿವ ವಾಣಿ ಹೇಳಿಕೆಗಳು. ಮೇ 28 ಬುಧವಾರ ದಂದು ಮುಂಜಾನೆ 6. ಗಂಟೆಗೆ ಡೊಳ್ಳಿನ ವಾದ್ಯ ವೈಭವಗಳೊಂದಿಗೆ ದೇವರ ಪಲ್ಲಕ್ಕಿ ಉತ್ಸವ..

ಮಧ್ಯಾಹ್ನ12.ಗಂಟೆಗೆ ಅನ್ನಸಂತರ್ಪಣೆ. ಅಂದೆ ರಾತ್ರಿ 10 ಗಂಟೆಗೆ ವಿಶ್ವಜ್ಯೋತಿ ಶ್ರೀ ಪಂಚಾಕ್ಷರ ನಾಟ್ಯ ಸಂಘ ಜೇವರ್ಗಿ ಇವರಿಂದ. ಅಕ್ಕ ಅಂಗಾರ ತಂಗಿ ಬಂಗಾರ ಎಂಬ ಸಾಮಾಜಿಕ ನಾಟಕ ನಡೆಯಲಾಗುತ್ತದೆ. ನಾಟಕದ ಮುಂಚೆ ಮಹಾ ದಾನಿಗಳಿಗೆ ವಿಶೇಷ ಸನ್ಮಾನ ಕಾರ್ಯಕ್ರಮ ನಡೆಯಲಾಗುತ್ತದೆ. ಎಂದು ಜಾತ್ರಾ ಕಮಿಟಿಯವರು ನಮ್ಮ ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್ ಗೆ ತಿಳಿಸಿದರು ಎಂದು ವರದಿಯಾಗಿದೆ.

**ತಾಲೂಕ ವರದಿಗಾರರು,**
**ಸಿಹಿ ಕಹಿ ಕನ್ನಡ ದಿನ ಪತ್ರಿಕೆ**
**ಹಾಗೂ ಎಸ್.ಕೆ ನ್ಯೂಸ್**
**ಕನ್ನಡ ಚಾನಲ್:**
**ಬಸವರಾಜ.ಸಂಕನಾಳ.**
**ಮುದ್ದೇಬಿಹಾಳ**

# ಧಾರಾಕಾರ ಮಳೆಗೆ ನೇಕಾರನ ಮನೆ ಕುಸಿತ

**ಬನಹಟ್ಟಿ :** ಇತ್ತೀಚೆಗೆ ಸುರಿದ ಧಾರಾಕಾರ ಮಳೆಗೆ ಇಲ್ಲಿಯ ಕಾಡದೇವರ ಬಡಾವಣೆಯ ಭಾರತಿ ರಾಮಯ್ಯ ಕಡಪಟ್ಟಿಯವರ ಮನೆ ಭಾಗಶಃ ಕುಸಿದು ಬಿದ್ದಿದೆ.

ಮಣ್ಣಿನ ಗೋಡೆ ಹಾಗು ಛಾವಣಿ ಕುಸಿದಿದ್ದು ಮನೆ ಸಾಮಗ್ರಿಗಳು ಹಾಳಾಗಿವೆ. ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯವಾಗಿಲ್ಲ.

ಕೂಲಿನೇಕಾರ: ಮನೆಬಿದ್ದಿರುವ ಮಾಲಿಕ ರಾಮಯ್ಯ ಕಡಪಟ್ಟಿ ಮಗ್ಗ ನೇಯ್ಗೆಗೆ ಕಾರ್ಖಾನೆಯೊಂದರಲ್ಲಿ ಕೂಲಿ ಮಾಡುತ್ತಾನೆ. ಮನೆ ಬಿದ್ದಿರುವ ಕಾರಣ ತೀವ್ರ ಮನನೊಂದಿರುವ ರಾಮಯ್ಯನ ಕುಟುಂಬಕ್ಕೆ ಶೀಘ್ರ ಪರಿಹಾರ ಅತ್ಯಗತ್ಯವಾಗಿದೆ.

**ಬಾರದ ಅಧಿಕಾರಿಗಳು:**
ಕೈಮಗ್ಗ, ಜವಳಿ ಅಥವಾ ಕಾರ್ಮಿಕ ಇಲಾಖೆ ಸೇರಿದಂತೆ ಯಾವ ಇಲಾಖೆಯ ಅಧಿಕಾರಿಗಳೂ ಇಲ್ಲಿ ಕೊನೆಯ ಪಕ್ಷ ಸೌಜನ್ಯಕ್ಕಾದರೂ ಭೆಟ್ಟಿ ನೀಡದಿರುವದು ವಿಷಾದನೀಯ.

ಇನ್ನಷ್ಟು ಕುಸಿಯುವ ಸಾಧ್ಯತೆ: ಮಳೆಯಿಂದ ಸಂಪೂರ್ಣ ತೇವಾಂಶಗೊಂಡಿರುವ ಇಡೀ ಮನೆಯ ಮೇಲ್ಛಾವಣಿಯು ಎಲ್ಲೆಂದರಲ್ಲಿ ಕುಸಿತದ ಭೀತಿ ಎದುರಿಸುತ್ತಿದೆ. ಹೀಗಿದ್ದಾಗ್ಯೂ ಅಲ್ಲೇ ಬದುಕು ಸಾಗಿಸುತ್ತಿರುವ ನೇಕಾರನ ಕುಟುಂಬದ ದಿನಗಳು ಕರಾಳವಾಗಿವೆ.

ಇವೆಲ್ಲದರ ಕುರಿತು ತಕ್ಷಣವೇ ಸಂಬಂಧಿಸಿದ ಅಧಿಕಾರಿಗಳು ಕುಸಿದಿರುವ ಮನೆಗೆ ಭೆಟ್ಟಿ ನೀಡಿ ಆರ್ಥಿಕವಾಗಿ ನೆರವಾಗಬೇಕಾದ ಅನಿವಾರ್ಯತೆಯಿದೆ.

'ನನ್ನ ಗಂಡ ನೇಯ್ದು ಬಂದ್ರನ ನಮ್ ಬದಕ್ರೀ.. ಬಿದ್ದ ಮನ್ಯಾಗ್ ಅಂಜುತ್ತ ಜೀವನ ನಡ್ಯಾಕತ್ರೀ.. ನಮ್ಗ



ದಿಕ್ಕ ತೋಚದಾಂಗ್ ಆಗೇತ್ರಿ. ನಮ್ಗಷ್ಟ ಸಹಾಯ ಮಾಡ್ರಿ.. ಎಂಬ ಅವಳ ಮನವಿ ಕರುಳು ಕಿತ್ತು ಬರುವಂತಿತ್ತು.

'ತೀವ್ರ ಸಂಕಷ್ಟದಲ್ಲಿರುವ ಕುಟುಂಬಕ್ಕೆ ಸರ್ಕಾರದಿಂದ ಮನೆ ದುರಸ್ಥಿ ಮಾಡಿಸಿ
ನೈಸರ್ಗಿಕ ವಿಕೋಪದಿಂದ ಹಾನಿಯಾಗಿರುವ ಮನೆಗೆ ಅನುದಾನ ಸರಕಾರ ಶೀಘ್ರವೇ ನೀಡಲಿ ಎಂದು ನಗರಸಭೆ ಸದಸ್ಯೆ ಜಯಶ್ರೀ ಬಾಗೇವಾಡಿ ಒತ್ತಾಯಿಸಿದ್ದಾರೆ.

# ಹಳ್ಳಿಯಿಂದ ನಗರಕ್ಕೆ ಆವರಿಸಿದ ಅಕ್ರಮ ಮದ್ಯದ ಘಾಟು

## ಇಲ್ಲಿ ಸಿಗುತ್ತೆ ಉದ್ರಿ ಸರಾಯಿ

**ರಬಕವಿ–ಬನಹಟ್ಟಿ :** ಅಕ್ರಮ ಸರಾಯಿ ಘಾಟು ಇದೀಗ ಗ್ರಾಮೀಣ ಪ್ರದೇಶದಿಂದ ನಗರಕ್ಕೂ ಆವರಿಸಿದ್ದು ಎಗ್ಗಿಲ್ಲದೆ ನಡೆಯುತ್ತಿದೆ. ಅಬಕಾರಿ ಇಲಾಖೆ ಕಣ್ಮುಚ್ಚಿ ಕುಳಿತಿದೆ.

ಇವರ ಜಾಣ ಕುರುಡುತನದ ಪ್ರದರ್ಶನದಿಂದ ಅಕ್ರಮ ಸಾರಾಯಿ ಮಾರಾಟ ಎಗ್ಗಿಲ್ಲದೆ ನಡೆಯುತ್ತಿದೆ. ಇದರಿಂದ ಗ್ರಾಮೀಣ ಭಾಗದ ಜೊತೆಗೆ ನಗರದ ವಾತಾವರಣವೂ ಹದಗೆಟ್ಟಿದ್ದು,

ನೇಕಾರರು ದುಶ್ಚಟದೊಂದಿಗೆ ಮತ್ತಷ್ಟು ಆರ್ಥಿಕ ಸಂಕಷ್ಟಕ್ಕೆ ಸಿಲುಕಲು ಕಾರಣವಾಗಿದೆ. ತಕ್ಷಣವೇ ಅಬಕಾರಿ ಇಲಾಖೆ ಇದನ್ನು ತಡೆಗಟ್ಟಬೇಕೆಂದು ನಾಗರಿಕರು ಒತ್ತಾಯಿಸಿದ್ದಾರೆ.

ಉದ್ರಿ ಸರಾಯಿ: ಹಣ ಕೊಟ್ಟರೂ ಸಾರಾಯಿ ಸಿಗದ ಪರಿಸ್ಥಿತಿಯಲ್ಲಿ ನೇಕಾರರಿಗೆ ವಾರಕ್ಕೊಮ್ಮೆ ಮಾತ್ರ ವೇತನ ದೊರಕುತ್ತದೆ. ಪ್ರತಿ ಮಂಗಳವಾರದವರೆಗೆ ಉದ್ರಿ ಸರಾಯಿ ನೀಡುವುದರಿಂದಾಗಿ ನೇಕಾರ ಮತ್ತಷ್ಟು ಕುಡಿತದ ಚಟಕ್ಕೆ ಅಂಟಿಕೊಳ್ಳಲು ಕಾರಣವಾಗಿದೆ. ಬನಹಟ್ಟಿಯ ಹೊರವಲಯ ಹಾಗು ಗುಡ್ಡದ ಪ್ರದೇಶದಲ್ಲಿ ಯಾವುದೇ ನೀತಿ ನಿಯಮಗಳಿಲ್ಲದೆ ದೇವಸ್ಥಾನವಿರಲಿ, ಶಾಲಾ ಕಾಲೇಜು ಆವರಣ ಇರಲಿ ಯಾವುದನ್ನೂ ಲೆಕ್ಕಿಸದೆ ಅಕ್ರಮ ಸಾರಾಯಿ ಮಾರಾಟ ಮಾಡುವಲ್ಲಿ ಕೆಲ ಪಾನಬೀಡಾ ಹಾಗು ಕಿರಾಣಿ ಅಂಗಡಿಗಳು ಕಾರಣವಾಗಿವೆ.

ಇವೆಲ್ಲದರ ಕುರಿತು ಅಬಕಾರಿ ಇಲಾಖೆಗೆ ಗೊತ್ತಿದ್ದರೂ, ಭಾರೀ ಪ್ರಮಾಣದ ಹಣವನ್ನು ತಮ್ಮ ಕಿಸೆಗೆ ಹಾಕುತ್ತಿರುವುದರಿಂದ ಅವರು ಮೌನಕ್ಕೆ ಶರಣಾಗಿದ್ದು, ಸಂಶಯಕ್ಕೆಡೆ ಮಾಡಿದೆ.

ಎಲ್ಲೆಂದರಲ್ಲಿ ಅಕ್ರಮ ಮದ್ಯ ದೊರಕುತ್ತದೆ. ಇದಕ್ಕೆ ಅಬಕಾರಿ ಇಲಾಖೆಯ ಸಾಥ್ ಇದ್ದು, ತಕ್ಷಣವೇ ಭ್ರಷ್ಟಾಚಾರದಲ್ಲಿ ತೊಡಗಿರುವ ಅಧಿಕಾರಿಗಳ ಮೇಲೆ ನಿರ್ದಾಕ್ಷಿಣ್ಯ ಕ್ರಮ ಜರುಗಿಸಿ ನೇಕಾರರ ಕುಟುಂಬ ಉಳಿಸುವಲ್ಲಿ ಸರ್ಕಾರ ಕಠಿಣ ನಿರ್ಧಾರ ಕೈಗೊಳ್ಳಬೇಕು ಎಂದು ರಬಕವಿ– ಬನಹಟ್ಟಿ ನಗರಸಭೆಯ ಮಾಜಿ ಅಧ್ಯಕ್ಷ ಶ್ರೀಶೈಲ ಬೀಳಗಿ ಒತ್ತಾಯಿಸಿದ್ದಾರೆ.

# ಏಕೊ ಕ್ಲಬ್ ಸಹಯೋಗದೊಂದಿಗೆ ಸಸಿ ನೆಡುವ ಕಾರ್ಯಕ್ರಮ



**ಜಮಖಂಡಿ :** ಜೀವನ ಬ್ಯಾಂಕ್ ಜಮಖಂಡಿಯ ಮ್ಯಾನೇಜರ್ ಚನ್ನಬಸಯ್ಯ ಹಾಗೂ ಸಿಬ್ಬಂದಿ ವರ್ಗ, ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಜಮಖಂಡಿಯ ಸಮಾಜಕಾರ್ಯ ವಿಭಾಗ ಹಾಗೂ ಏಕೊ ಕ್ಲಬ್ ಸಹಯೋಗದೊಂದಿಗೆ ಮಹಾವಿದ್ಯಾಲಯದ ಆವರಣದಲ್ಲಿ ಸಸಿ ನೆಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದಲ್ಲಿ ಉದ್ಘಾಟನಾ ಪರ ನುಡಿಗಳನ್ನು ಉಜ್ಜೀವನಿ ಬ್ಯಾಂಕಿನ ಮ್ಯಾನೇಜರ್ ಚನ್ನಬಸಯ್ಯ ಅವರು,

ನಮ್ಮ ಎಲ್ಲಾ ಸಿಬ್ಬಂದಿಗಳೊಂದಿಗೆ ಈ ಸೇವಾ ಕಾರ್ಯಗಳನ್ನು ಕೈ ಕೊಳ್ಳುವುದರ ಜೊತೆಗೆ ವಿದ್ಯಾರ್ಥಿಗಳಲ್ಲಿ ಸಮಾಜ ಸೇವೆ ಹಾಗೂ ರಾಷ್ಟ್ರಸೇವಾ ಮನೋಭಾವನೆ ಬೆಳೆಸುವುದು ನಮ್ಮ ಉದ್ದೇಶವಾಗಿದೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮಹಾವಿದ್ಯಾಲಯದ ಪ್ರಾಚಾರ್ಯೆ ಡಾ. ಸುನಂದಾ ಎಸ್. ಶಿರೂರ ಅವರು ಮಾತನಾಡಿ, ಪ್ರತಿಯೊಬ್ಬ ವಿದ್ಯಾರ್ಥಿಯು ಕಾಲೇಜಿನ ಆವರಣದ ಸ್ವಚ್ಛತೆಯ ಜೊತೆಗೆ ತಮ್ಮ ತರಗತಿ ಕೋಣೆಗಳನ್ನು ಸಹ ಸ್ವಚ್ಛವಾಗಿ ಇಟ್ಟುಕೊಳ್ಳಬೇಕು. ತಮ್ಮ ನೆರೆಹೊರೆಯ ಸುತ್ತಮುತ್ತಲಿನ ಪ್ರದೇಶವನ್ನು ಸಹ ಸ್ವಚ್ಛವಾಗಿಟ್ಟುಕೊಳ್ಳಲು ತಿಳಿಸಿ ಹೇಳಿದರು.

ಸಮಾರಂಭದಲ್ಲಿ ಡಾ. ವಿ. ಆರ್. ದಳವಾಯಿ, ಡಾ. ಎಂ. ಎಂ. ಮಂಟೂರ, ಎಸ್. ಕೆ. ಡೇಂಬರೆ, ಡಾ. ಎಸ್. ಎಸ್. ಸಿದ್ದಾಪೂರ, ಯು. ಎಸ್. ದೇಸಾಯಿ, ಡಾ. ಎಮ್. ಎಸ್. ಹಡಪದ, ಹಣಮಂತ ಯರಗೊಪ್ಪ, ಕೆ. ಟಿ. ಜಕನೂರ, ರಾಮಪ್ಪ ಬಾಡಗಿ, ಸುದೈವ ಪಾಣಿ, ಮಾನಿಂಗ ಅವಟಿ ಮೊದಲಾದವರು ಉಪಸ್ಥಿತರಿದ್ದರು.

# ಬೇಸಿಗೆ ಶಿಬಿರಗಳು ಮಕ್ಕಳ ವ್ಯಕ್ತಿತ್ವ ವಿಕಸನಕ್ಕೆ ವರದಾನ: ಶಿವಲಿಂಗ ಸಿದ್ನಾಳ

**ಮಹಾಲಿಂಗಪುರ :** ಬೇಸಿಗೆ ಶಿಬಿರಗಳು ಮಕ್ಕಳ ಕಲಿಕೆಗೆ ಉತ್ತೇಜನ ನೀಡುವ ಮೂಲಕ ಅವರ ವ್ಯಕ್ತಿತ್ವ ವಿಕಸನಕ್ಕೆ ವರದಾನವಾಗಿವೆ ಎಂದು ಕೆ.ಎಲ್.ಇ. ಕಾಲೇಜಿನ ಉಪನ್ಯಾಸಕ ಶಿವಲಿಂಗ ಸಿದ್ನಾಳ ಹೇಳಿದರು.

ಪಟ್ಟಣದ ನವಚೇತನ ಶಿಕ್ಷಣ ಸಂಸ್ಥೆಯ ಜೆಸಿ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಉಚಿತ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ಮಕ್ಕಳು ರಜಾ ದಿನಗಳಲ್ಲಿ ಮಜಾ ಮಾಡದೇ, ಸಮಯ ವ್ಯರ್ಥ ಮಾಡದೇ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿ ಕಲಿಕೋತ್ಸಾಹ ಉಳಿಸಿಕೊಳ್ಳಲು ಈ ಶಾಲೆಯ ಉಚಿತ ಬೇಸಿಗೆ ಶಿಬಿರ ಸಹಕಾರಿಯಾಗಿದೆ ಎಂದರು.

ಕಾನಿಪ ಸಂಘದ ಅಧ್ಯಕ್ಷ ಮಹೇಶ ಮನ್ನಯ್ಯನವರಮಠ, ಮಕ್ಕಳ ಸುಪ್ತ ಪ್ರತಿಭೆ ಅನಾವರಣಕ್ಕೆ ಮತ್ತು ವಿಶೇಷ ಪ್ರಾವೀಣ್ಯತೆಯ ಅಭಿವ್ಯಕ್ತಿಗೆ ಪೂರಕವಾಗಿ ಜೇಸಿ ಸಂಸ್ಥೆ ಒಳ್ಳೆಯ ಕಾರ್ಯ ಮಾಡುತ್ತಿದೆ



ಎಂದರು. ಸಂಸ್ಥೆಯ ಉಪಾಧ್ಯಕ್ಷ ಶಿವಾನಂದ ತಿಪ್ಪಾ ಅಧ್ಯಕ್ಷತೆ ವಹಿಸಿದ್ದರು.

ಶಾಲೆಯಲ್ಲಿ ಐವತ್ತು ದಿನಗಳ ಕಾಲ ನಡೆದ ಉಚಿತ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭ ಮೇ. 17 ರಂದು ಜರುಗಿತು. ಒಂದೂವರೆ ತಿಂಗಳು ಮಕ್ಕಳಿಗೆ ಕಲಿಸಿದ ಪಠ್ಯ, ದೇಸಿ ಕ್ರೀಡೆ, ಸಂಸ್ಕಾರ, ಕಲೆ, ಸಂಗೀತ, ನೃತ್ಯಗಳಿಗೆ ಸಂಬಂಧಿಸಿದಂತೆ ಎಲ್ಲ ಕೌಶಲ್ಯ ಪ್ರದರ್ಶಿಸಲಾಯಿತು.

ತ್ಯಾಜ್ಯದಿಂದ ಮನೆ, ಗಿಡ, ರಸ್ತೆ, ಹೂವು, ಗ್ರೀಟಿಂಗ್ಸ್, ಗೊಂಬೆ, ಪ್ರಾಣಿ, ಪಕ್ಷಿ, ಪರಿಸರದ ಪರಿಕರಗಳು ಸೇರಿದಂತೆ ನಾನಾ ಕಲಾಕೃತಿ ಹಾಗೂ ಮಾದರಿಗಳನ್ನು ತಯಾರಿಸಿ ಪ್ರದರ್ಶಿಸಿದರು. ದೇಶಭಕ್ತಿ ಗೀತೆಗೆ ಸಮೂಹ ನೃತ್ಯ, ಸಾಂಪ್ರದಾಯಿಕ ಉಡುಗೆಯಲ್ಲಿ ದೇಸಿ ನೃತ್ಯ, ಭರತನಾಟ್ಯ, ಅಬ್ಯಾಕಸ್ ಎಂಬ ತಾರ್ಕಿಕ ವಿದ್ಯೆ, ಗಾಂಧಾರ ಕಲೆ, ಗ್ರಾಮೀಣ ಜವಾರಿ ಆಟಗಳು ಸೇರಿದಂತೆ ನಾನಾ ಕೌಶಲ್ಯ ಮತ್ತು ಕಸರತ್ತು ಪ್ರದರ್ಶಿಸಿದರು. ವಿಜೇತ ವಿದ್ಯಾರ್ಥಿಗಳಿಗೆ ಬಹುಮಾನ ಮತ್ತು ಪ್ರಮಾಣಪತ್ರ ವಿತರಿಸಲಾಯಿತು.

ಅತಿಥಿಗಳಾದ ಶಿವಲಿಂಗ ಸಿದ್ನಾಳ, ಮಹೇಶ ಮನ್ನಯ್ಯನವರಮಠ, ಶಿಕ್ಷಕಿಯರಾದ ಪ್ರೀತಿ ಕಲ್ಯಾಣಿ, ತೃಪ್ತಿ ಕುಳ್ಳೊಳ್ಳಿ, ಲಕ್ಷ್ಮಿ ಕುಳ್ಳೊಳ್ಳಿ ಅವರನ್ನು ಸನ್ಮಾನಿಸಲಾಯಿತು. ಮುಖ್ಯ ಶಿಕ್ಷಕ ಎಸ್. ಜಿ. ಕೌಜಲಗಿ, ಶಿಕ್ಷಕ ಸಿಬ್ಬಂದಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

**ಗಮನ ಭಗವದ್ಗೀತಾ ಸಾರ:**
ಮುಖ್ಯವಾಗಿ ಮುಸ್ಲಿಂ ಶಿಕ್ಷಕಿ ಶಬಾನಾ ಮುಂಡಗನೂರ, ತೃಪ್ತಿ ಕುಳ್ಳೊಳ್ಳಿ ಮಾರ್ಗದರ್ಶನದಲ್ಲಿ ಭಗವದ್ಗೀತೆಯ ಹದಿನೆಂಟು ಅಧ್ಯಾಯಗಳು ಏನು ಬೋಧಿಸುತ್ತವೆ ಎಂಬುದನ್ನು ಕನ್ನಡ, ಇಂಗ್ಲೀಷ್ ಮತ್ತು ಸಂಸ್ಕೃತ ಭಾಷೆಗಳಲ್ಲಿ ಪುಟ್ಟ ಬಾಲಕರು ಕೃಷ್ಣ ಭಕ್ತರ ವೇಷದಲ್ಲಿ ಉಚ್ಚರಿಸಿದರು.

ಕೊನೆಯಲ್ಲಿ ಆಪರೇಷನ್ ಸಿಂಧೂರದ ವೀರ ಯೋಧರಿಗೆ ಇನ್ನಷ್ಟು ಶಕ್ತಿ ಬರಲಿ, ಭಾರತದ ಪ್ರತಿಯೊಬ್ಬ ಹೆಣ್ಣು ಮಕ್ಕಳ ಸಿಂಧೂರ ಅಮರವಾಗಿರಲಿ ಎಂದು ಪ್ರಾರ್ಥಿಸಿದರು.

# ಲಯನ್ಸ ಕ್ಲಬ್ ನೂತನ ಪದಾಧಿಕಾರಿಗಳ ಆಯ್ಕೆ



**ಮಹಾಲಿಂಗಪುರ :** ಪಟ್ಟಣದ ಲಯನ್ಸ್ ಕ್ಲಬ್ ನೂತನ ಅಧ್ಯಕ್ಷರಾಗಿ ಸಿದ್ದು ನಕಾತಿ, ಕಾರ್ಯದರ್ಶಿಣಿಯಾಗಿ ಡಾ. ವಿದ್ಯಾ ದಿನ್ನಿಮನಿ, ಖಜಾಂಚಿಯಾಗಿ ಪ್ರಶಾಂತ ಅಂಗಡಿ, ಉಪಾಧ್ಯಕ್ಷರಾಗಿ ಹುಚ್ಚೇಶ ವಡ್ಡರ ಅವಿರೋಧವಾಗಿ ಆಯ್ಕೆಯಾದರು.

ಪಟ್ಟಣದ ವೈದ್ಯರ ಸಭಾ ಭವನದಲ್ಲಿ ಜರುಗಿದ ಸಂಸ್ಥೆಯ ಸರ್ವ ಸದಸ್ಯರ ವಾರ್ಷಿಕ ಮಹಾ ಸಭೆಯಲ್ಲಿ 2025–26 ನೇ ಸಾಲಿಗೆ ಸರ್ವಾನುಮತದಿಂದ ನೂತನ ಪದಾಧಿಕಾರಿಗಳ ಆಯ್ಕೆ ಮಾಡಲಾಯಿತು. ಚುನಾವಣಾ ಅಧಿಕಾರಿಯಾಗಿ ಲಯನ್ ಡಾ. ರಮೇಶ ಶೆಟ್ಟರ ಕಾರ್ಯ ನಿರ್ವಹಿಸಿದರು.

ಲಯನ್ಸ ಸಂಸ್ಥೆಯ ಅಧ್ಯಕ್ಷ ರಾಜು ಎಸ್. ತಾಳಿಕೋಟಿ ಅಧ್ಯಕ್ಷತೆ ವಹಿಸಿದ್ದರು.

ಸಭೆಯಲ್ಲಿ ಡಾ. ಉಮಾ ಗುಂಡಾ, ಸಂಜೀವ ಶಿರೋಳ, ಡಾ. ವಿಶ್ವನಾಥ ಗುಂಡಾ, ಡಾ. ಅಶೋಕ ದಿನ್ನಿಮನಿ, ಸೋಮಶೇಖರ ಸಂಶಿ, ಡಾ. ಶಕುಂತಲಾ ಸಂಶಿ, ಡಾ. ಎಮ್. ಎಸ್. ಚನ್ನಾಳ, ಡಾ. ಸುರೇಖಾ ಚನ್ನಾಳ, ಪ್ರಕಾಶ ತಾಳಿಕೋಟಿ, ಸಚಿನ ಗುಂಡಾ, ಉಮೇಶ ಸಿದ್ನಾಳ, ಪ್ರಕಾಶ ಕೋಳಿಗುಡ್ಡ, ಸಂದೀಪ ಚಿಕ್ಕೋಡ್ಡೆ, ಮಹಾಲಿಂಗ ಮೂಡಲಗಿ, ಡಾ. ಸೌಮ್ಯ ಕನಕರಡ್ಡಿ, ಅಶ್ವಿನಿ ಕೋಳಿಗುಡ್ಡ, ವಿದ್ಯಾ ಶಿರೋಳ ಭಾಗವಹಿಸಿದ್ದರು.

# ನರೇಗಾ ಕಾಮಗಾರಿ ಕೂಲಿ ಕಾರ್ಮಿಕರಿಗೆ, ರೈತರಿಗೆ ಸಹಾಯಕ ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿಗಳು ಬಲವಂತ ರಾಠೋಡ



**ಝಳಕಿ :** ಸರ್ಕಾರ ಬಡ ಕೂಲಿ ಕಾರ್ಮಿಕರಿಗಾಗಿ ನರೇಗಾದಡಿ ವಿಶೇಷ ಕಾಮಗಾರಿ ವ್ಯವಸ್ಥೆ ಮಾಡಿದ್ದೂ, ಇದರ ಸದುಪಯೋಗ ಪಡೆದುಕೊಳ್ಳಿ, ರೈತರು, ಕೂಲಿಕಾರ್ಮಿಕರಿಗೆ ಸರ್ಕಾರದಿಂದ ಹಲವಾರು ಯೋಜನೆಗಳು ರೂಪಿಸಿದ್ದು, ಇದರಿಂದಾಗಿ ಆರ್ಥಿಕವಾಗಿ ಸದೃಢ ವಾಗಲಿ ಅನ್ನೋದೇ ಮುಖ್ಯ ಉದ್ದೇಶ. ಬಳ್ಳೊಳ್ಳಿ ಗ್ರಾಮ ಪಂಚಾಯತ ಅಡಿಯಲ್ಲಿ ಬರುವ ಗುಂದವಾನ ಕೆರೆ ನಂ-2 ರ, ಸೋಮಣ್ಣ ಸಂಗೋಗಿ ಇವರ ಜಮೀನಿನ ಹತ್ತಿರ ನಡೆದ ದುಡಿಯೋಣ ಬಾ ಅಭಿಯಾನದಡಿ ನಡೆದ ಬೇಸಿಗೆ ನರೇಗಾ ಕಾಮಗಾರಿ ಕೆರೆ ಹುಳು ಎತ್ತುವ ಸ್ಥಳಕ್ಕೆ ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಬಲವಂತ ರಾಠೋಡ ಧಿಢಿರನೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಕೂಲಿ ಕಾರ್ಮಿಕರಿಗೆ ಸಂಪೂರ್ಣ 100 ದಿನಗಳ ಕಾಮಗಾರಿ ಕೊಡಲಾಗುವದು, ಕಾಮಗಾರಿ ಮಾಡುವಾಗ ಕಾರ್ಮಿಕರಿಗೆ ಯಾವುದೇ ತೊಂದರೆ ಆಗಬಾರದು, ಕುಡಿಯಲು ನೀರಿನ ವ್ಯವಸ್ಥೆ, ಕೂರಲು ನೆರಳಿನ ವ್ಯವಸ್ಥೆ, ಮಕ್ಕಳಿಗೆ ಪಾಲನೆ ಪೋಷಣೆ ವ್ಯವಸ್ಥೆ ಎಲ್ಲವು ಸರಿಯಾಗಿ ಮಾಡುವಂತೆ ಸಿಬ್ಬಂದಿಗಳಿಗೆ ಆದೇಶ ನೀಡಿದರು.

ಈ ಸಂದರ್ಭದಲ್ಲಿ ಸಹಾಯಕ ನಿರ್ದೇಶಕ ಸಂಜಯ ಖಡಗೇಕರ, ಇಂಜಿನಿಯರ್ ಶಿವರಾಜ ಬಿರಾದಾರ, ತಾಂತ್ರಿಕ ಸಹಾಯಕ ಸಾಹಿಲ ಧನಶೆಟ್ಟಿ, ಸಹಾಯಕ ಆಡಳಿತಗಾರ ಪ್ರದೀಪ್ ಹಿಳ್ಳಿ, ಸೆಕ್ರೆಟರಿ ಆನಂದ ಚವ್ಹಾಣ, ಭರತ ತೋಟದಾರ, ಭೀಮಾಶಂಕರ್ ನಾವಿ, ಗ್ರಾಮ ಕಾಯಕ ಮಿತ್ರ ಪೂಜಾ ನಾಯಕೋಡಿ, ಪರಾಶುರಾಮ ಗೊನಗೊಂಡ, ಹಾಗೂ ಸುತ್ತಲಿನ ರೈತರು, ಕಾರ್ಮಿಕರು ಉಪಸ್ಥಿತರಿದ್ದರು.

# ಬಾಗೇವಾಡಿಗೆ ರಾಷ್ಟ್ರೀಯ ಭಾವೈಕ್ಯತೆ ಪ್ರಶಸ್ತಿ



**ವಿಜಯಪುರ :** ವಿಜಯಪುರ ತಾಲೂಕಿನ ಉತ್ನಾಳ ಗ್ರಾಮದ ಕ್ರೀಡಾ ಕ್ಷೇತ್ರದ ಸಾಧಕ ಬಸವರಾಜ ಬಾಗೇವಾಡಿ ಅವರಿಗೆ ಮುದ್ದೇಬಿಹಾಳ ತಾಲೂಕಿನ ಕಾರಕೂರ ಗ್ರಾಮದಲ್ಲಿ ರಾಷ್ಟ್ರೀಯ ಭಾವೈಕ್ಯತೆ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು. ಕಾರಕೂರ, ಗ್ರಾಮದಲ್ಲಿ ನಡೆದ ಶ್ರೀ ಕೊಡೇಕಲ ದಾವಲಮಲಿಕ ಅನಾಥಾಶ್ರಮದ ವತಿಯಿಂದ 2025 ನೇಯ ಸಾಲಿನ ರಾಷ್ಟ್ರೀಯ ಬಾವೈಕ್ಯತೆ ಪ್ರಶಸ್ತಿ ಸಮಾರಂಭ ಜರುಗಿತು.

ಈ ಸಂದರ್ಭದಲ್ಲಿ ಕ್ರೀಡಾ ಕ್ಷೇತ್ರದಲ್ಲಿ ಸಾಧನೆಯನ್ನು ಗುರುತಿಸಿ ಬಸವರಾಜ ಬಾಗೇವಾಡಿ ಉತ್ನಾಳ ಅವರಿಗೆ ಈ ಕಾರ್ಯಕ್ರಮದಲ್ಲಿ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ ಚೌಧರಿ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಿದರು. ಪರಮ ಪೂಜ್ಯ ಶ್ರೀ ದಾವಲಮಲಿಕ ಅಜ್ಜನವರು ಹಾಗೂ ಅನೇಕ ಗಣ್ಯರು ಉಪಸ್ಥಿತರಿದ್ದರು.

# ಭಾರತೀಯ ಸೈನ್ಯ ಪರಾಕ್ರಮ ಮೆರೆದಿದೆ: ಶ್ರೀಶೈಲ ಜಗದ್ಗುರು



**ತಾಳಿಕೋಟೆ :** ಇಂದಿನ ದಿನಮಾನವನ್ನು ನೋಡಿದರೆ ಯುದ್ದದ ವಾತಾವರಣವೆಂಬುದು ಕಂಡುಬರುತ್ತಲಿದೆ ಈ ಸಂದರ್ಬದಲ್ಲಿ ಯುವಕರು ದೇಹಾಭಿಮಾನವನ್ನು ಬಿಟ್ಟು ದೇಶಾಭಿಮಾನವನ್ನು ರೂಡಿಸಿಕೊಳ್ಳಬೇಕೆಂದು ಶ್ರೀಶ್ರೀಶ್ರೀ 1008 ಡಾ.ಚನ್ನಸಿದ್ದರಾಮ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದರು ಶ್ರೀಶೈಲ ಪೀಠ ಅವರು ನುಡಿದರು.

ಶುಕ್ರವಾರರಂದು ತಾಳಿಕೋಟೆ ಪಟ್ಟಣದಲ್ಲಿ ಖಾಸಗಿ ಕಾರ್ಯಕ್ರಮವೊಂದಕ್ಕೆ ಆಗಮಿಸಿ ಪುಣ್ಯಕೋಟಿ ಎಂಬ ಗ್ರಹದಲ್ಲಿ ಜಗದ್ಗುರುಗಳು ತಂಗಿದ ವಿಷಯವನ್ನು ಅರಿತ ಪತ್ರಿಕೆ ನೇರವಾಗಿ ಶ್ರೀಗಳೊಂದಿಗೆ ಸಂಪರ್ಕಿಸಿ ಕೆಲವು ವಿಚಾರಗಳ ಕುರಿತು ಜಗದ್ಗುರುಗಳಿಂದ ಅಪೇಕ್ಷಿಸಿದಾಗ ಜಗದ್ಗುರುಗಳು ಕೆಳಗಿನಂತೆ ವಿವರಿಸಿದರು.

ದೇಹಾಭಿಮಾನವೆಂದರೆ ನಾನು ಸುಂದರವಿದ್ದೇನೆನ್ನಆಸ್ತಿಬಹಳೇದೊಡ್ಡದಿದೆ ನನ್ನದುವರ್ಚಸ್ಸುಘನತೆಗೌರವಬಹಳವಿದೆ ಎಂಬ ಭಾವನೆಯನ್ನು ರೂಡಿಸಿಕೊಳ್ಳದೇ ದೇಶಕ್ಕಾಗಿ ದುಡಿಯುವ ಮನೋಭಾವ ಯುವಕರು ಬೆಳೆಸಿಕೊಳ್ಳಬೇಕೆಂದರು. ಯಾಕೆಂದರೆ ಎಲ್ಲಕ್ಕಿಂತ ದೇಶ ದೊಡ್ಡದು ಪ್ರಸಂಗ ಬಂದರೆ ಧರ್ಮಕ್ಕಿಂತಲೂ ದೇಶವು ದೊಡ್ಡದಾಗಿ ಕಾಣಿಸಿಕೊಳ್ಳಲಿದೆ ಧರ್ಮ ಉಳಿಯಬೇಕಾದರೆ ದೇಶ ಉಳಿದರೆ ಮಾತ್ರ ಧರ್ಮ ಉಳಿಯಲು ಸಾದ್ಯವೆಂದರು. ಭಾರತೀಯ ಸಂಸ್ಕೃತಿ ಉಳಿಯಬೇಕಾದರೆ ಭಾರತ ಉಳಿಯಬೇಕು ದೇಶಾಭಿಮಾನವೆಂಬುದು ಸಾಮಾನ್ಯವಲ್ಲಾ ಕಾರಣ ಯುವಕರು ದುಶ್ಚಟಗಳಿಗೆ ಬಲಿಯಾಗದೇ ಇವೇಲ್ಲವನ್ನು ಕೈಬಿಟ್ಟು ದೇಶಾಭಿಮಾನ ಧರ್ಮಾಭಿಮಾನ ಮುಖ್ಯವಾಗಿ ಇವುಗಳನ್ನು ರೂಡಿಸಿಕೊಂಡು ನಡೆಯಬೇಕೆಂದರು.

ಧರ್ಮಾಭಿಮಾನದಿಂದಮನುಷ್ಯನಿಗೆಶಾಂತಿ ಒಳ್ಳೆಯ ಸಂಸ್ಕಾರ ಮೌಲ್ಯಗಳ ಮೂಲಕ ದೇವ ಸಾಕ್ಷಾತ್ಕಾರಕ್ಕೆ ಅನುಕೂಲವಾಗಲಿದೆ ಎಂದರು. ದೇಶಾಭಿಮಾನದಿಂದ ಜಾಗತಿಕವಾಗಿ ಈ ದೇಶ ಬೆಳಯಬೇಕಾದರೆ ದೇಶಕ್ಕಾಗಿ ನಮ್ಮ ಕೊಡುಗೆ ಏನು ಎಂಬುದರ ಬಗ್ಗೆ ವಿಚಾರ ಮಾಡಿದಾಗ ರಾಷ್ಟ್ರಮಟ್ಟದಲ್ಲಿ ನಮ್ಮ ದೇಶವನ್ನು ಗುರುತಿಸಿಕೊಳ್ಳಲು ಸಾದ್ಯವಾಗಲಿದೆ ಎಂದ ಜಗದ್ಗುರುಗಳು ಪ್ರಸ್ತುತ ವಿದ್ಯಮಾನದಲ್ಲಿ ಪುಲ್ಗಾಮ ಉಗ್ರರ ದಾಳಿಯನ್ನು ಪ್ರತಿಕಾರವಾಗಿ ಭಾರತೀಯ ಸೈನ್ಯ ಪರಾಕ್ರಮ ಮೆರೆದಿದ್ದಲ್ಲದೇ ಸರಿಯಾದ ತಕ್ಕ ಉತ್ತರವನ್ನು ಕೊಟ್ಟಿದ್ದಾರೆಂದು ಹೇಳಿದ ಜಗದ್ಗುರುಗಳು ಕಾರಣ ಭಾರತೀಯ ಸೈನಿಕರಿಗೆ ಅಭಿನಂದನೆ ಸಲ್ಲಿಸುತ್ತೇನೆಂದು ಜಗದ್ಗುರುಗಳು ಹೇಳಿದರು.

ಭಾರತೀಯ ಸಂಸ್ಕೃತಿಯನ್ನು ವಿದೇಶಿಗರು ಮೇಚ್ಚುಗೆ ವ್ಯಕ್ತಪಡಿಸುತ್ತಾ ಸಾಗಿದ್ದಾರೆ ಈ ಸಂಸ್ಕೃತಿಯಲ್ಲಿ ಆದ್ಯಾತ್ಮೀಕ ಸಂಸ್ಕೃತಿ ಒಳಗೊಂಡಿದ್ದೇ ಕಾರಣವಾಗಿದೆ ಎಂದರು. ಧರ್ಮದಿಂದ ಮಾನಸಿಕ ನೆಮ್ಮದಿಯ ಜೊತೆಗೆ ಸದ್ಗತಿ ಪ್ರಾಪ್ತವಾಗಲಿದೆ ಇದರಿಂದ ನಮ್ಮ ದೇಶವನ್ನು ಯಾವ ರೀತಿ ಬೆಳೆಸಬೇಕೆಂಬ ಮಾರ್ಗವೂ ಕೂಡಾ ದೊರೆಯಲಿದೆ ಎಂದರು. ನಮ್ಮ ದೇಶದ ಸೈನಿಕರು ಪ್ರಸಂಗ ಬಂದರೆ ಸಂದಾನಕ್ಕೂ ಸೈ ಇಲ್ಲದಿದ್ದರೆ ಯುದ್ದಕ್ಕೂ ಸೈ ಎಂಬ ವಿಚಾರದಲ್ಲಿದ್ದ ಭಾರತೀಯ ಸೈನ್ಯದ ಸೇವಾ ಕಾರ್ಯ ಮೇಚ್ಚುವಂತಹದ್ದಾಗಿದೆ ಎಂದು ಹೇಳಿದ ಜಗದ್ಗುರುಗಳು ಆಧಿಕಾಲದಿಂದಲೂ ಭಾರತೀಯ ಸಂಸ್ಕೃತಿ ಎಂಬುದು ಮೇಚ್ಚುಗೆಗೆ ಪಾತ್ರವಾಗಿದೆ ಈ ಕಾರಣದಿಂದಲೇ ವಿದೇಶಿಗರು ಭಾರತೀಯ ಸಂಸ್ಕೃತಿಯತ್ತ ವಾಲುತ್ತಾ ಸಾಗಿದ್ದಾರೆಂದು ಜಗದ್ಗುರುಗಳು ನುಡಿದರಲ್ಲದೇ ಒಟ್ಟಾರೆ ಯುವಕರು ದೇಹಾಭಿಮಾನಕ್ಕಿಂತ ದೇಶಾಭಿಮಾನವನ್ನು ರೂಡಿಸಿಕೊಳ್ಳುವ ಕಾರ್ಯಕ್ಕೆ ಇನ್ನೂ ಮುಂದಾಗಬೇಕಾಗಿದೆ ಎಂದು ಶ್ರೀಶ್ರೀಶ್ರೀ 1008 ಡಾ.ಚನ್ನಸಿದ್ದರಾಮ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದರು ಶ್ರೀಶೈಲ ಪೀಠ ಅವರು ಪತ್ರಿಕೆಗೆ ತಿಳಿಸಿದರು. ಇದೇ ಸಮಯದಲ್ಲಿ ಗುಂಡಕನಾಳ ಹಿರೇಮಠದ ಶ್ರೀ ಷ.ಬ್ರ.ಗುರುಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು, ಪುಣ್ಯಕೋಟಿ ಗ್ರಹದ ಒಡೆಯರಾದ ಈರಯ್ಯ ಗದಗಯ್ಯ ಹಿರೇಮಠ, ಆಯ್.ಜಿ.ಹಿರೇಮಠ, ಎನ್.ಎಸ್.ಮದ್ದರಕಿ, ಗುರು ಕೊಪ್ಪದ, ಯುವ ಸಿರಿ ಸೌಹಾರ್ದ ಸಂಘದ ಅಧ್ಯಕ್ಷರಾದ ಶ್ರೀಮತಿ ವಿಜಯಲಕ್ಷ್ಮೀ ಹಿರೇಮಠ, ಹಿರಿಯ ಪತ್ರಕರ್ತರಾದ ಜಿ.ಟಿ.ಘೋರ್ಪಡೆ ಅವರು ಉಪಸ್ಥಿತರಿದ್ದು ಜಗದ್ಗುರುಗಳಿಂದ ಆಶಿರ್ವಾದ ಪಡೆದರು.

# ಅತಿಥಿ ಶಿಕ್ಷಕ,ಉಪನ್ಯಾಸಕರ ನೇಮಕಕ್ಕೆ ಜಾರಿಗೆ ತಂದಿರುವ ಪ್ರವೇಶ ಪರೀಕ್ಷೆ ರದ್ದುಗೊಳಿಸಲು ಮನವಿ



**ವಿಜಯಪುರ :** ಕರ್ನಾಟಕ ಮಾದಿಗ ಸಂಘ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯವರು ಅತಿಥಿ ಶಿಕ್ಷಕರ ಹಾಗೂ ಉಪನ್ಯಾಸಕರ ನೇಮಕಾತಿಗಾಗಿ ಹೊಸದಾಗಿ ಜಾರಿಗೆ ತಂದಿರುವ ಪ್ರವೇಶ ಪರೀಕ್ಷೆ ಎಂಬ ಮಾನದಂಡವನ್ನು ಕೂಡಲೆ ರದ್ದುಗೊಳಿಸಲು ಕುರಿತು ಜಿಲ್ಲಾಧಿಕಾರಿಗಳಾದ ಟಿ. ಭೂಬಾಲನ ಅವರ ಮುಖಾಂತರ ಸನ್ಮಾನ್ಯ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರಿಗೆ ಮನವಿ ಸಲ್ಲಿಸಿದರು.

ಕರ್ನಾಟಕ ಮಾದಿಗರ ಸಂಘದ ಜಿಲ್ಲಾಧ್ಯಕ್ಷರಾದ ಶ್ರೀಶೈಲ ರತ್ನಾಕರ ಮಾತನಾಡಿ ಪ್ರವೇಶ ಪರೀಕ್ಷೆ ನಿಯಮವನ್ನು ಸಂಪೂರ್ಣವಾಗಿ ರದ್ದುಗೊಳಿಸಬೇಕು.ಹಿಂದೆ ಕಾರ್ಯನಿರ್ವಹಿಸಿದ ಅತಿಥಿ ಶಿಕ್ಷಕರನ್ನು ಹಾಗೂ ಉಪನ್ಯಾಸಕರನ್ನು ಅವರ ಶ್ರಮಕ್ಕೆ ಬೆಲೆಕೊಟ್ಟು, ತೆ ವರ್ಷವೂ ಅವರನ್ನೇ ಮುಂದುವರಿಸಬೇಕು.ಅತಿಥಿ ಶಿಕ್ಷಕರಿಗೆ ಹಾಗೂ ಉಪನ್ಯಾಸಕರಿಗೆ ಸರ್ಕಾರದ ನೇಮಕಾತಿಯಲ್ಲಿ ಅನ್ವಯವಾಗುವಂತೆ ಪ್ರತಿವರ್ಷಕ ರಂತೆ ಸುಮಾರು 25 ರವರೆಗೆ ಕೃಪಾಂಕಗಳನ್ನು ನೀಡಬೇಕು. ಪ್ರತಿಯೊಬ್ಬ ಅತಿಥಿ ಶಿಕ್ಷಕ ಹಾಗೂ ಉಪನ್ಯಾಸಕರಿಗೆ ಸೇವಾ ಭದ್ರತೆಯನ್ನು ಒದಗಿಸಿಕೊಡಬೇಕು. ಕನಿಷ್ಠ ವೇತನ ಕಾಯ್ದೆಯಡಿ ಮಾಸಿಕ 35,000 ಗೌರವ ಧನವನ್ನು ನೀಡಬೇಕು.

ಶಾಂತಕುಮಾರ ಭಾವಿಕಟ್ಟಿ ಮಾತನಾಡಿ ಮಹಿಳಾ ಶಿಕ್ಷಕಿ/ಉಪನ್ಯಾಸಕೀಯರಿಗೆ ಪ್ರಸೂತಿ ರಜೆಯ ಜೊತೆಗೆ ವೇತನವನ್ನು ಒದಗಿಸಬೇಕು.ವರ್ಷದ 12 ತಿಂಗಳು ವೇತನ ಪಾವತಿಸಬೇಕು. (ಕಾರಣ ಅತಿಥಿ ಶಿಕ್ಷಕರ ಹಾಗೂ ಉಪನ್ಯಾಸಕರ ಕುಟುಂಬಗಳು ಈ ವೃತ್ತಿಯ ಮೇಲೆಯೇ ಅವಲಂಬನೆ ಆಗಿರುವುದರಿಂದುಕಾರ್ಯನಿರ್ವಹಿಸುವ ಪ್ರತಿಯೊಬ್ಬ ಅತಿಥಿ ಶಿಕ್ಷಕ ಹಾಗೂ ಉಪನ್ಯಾಸಕರಿಗೆ ಜೀವವಿಮಾ ಸೌಲಭ್ಯ ಒದಗಿಸಿಕೊಡಬೇಕು.ಕಾಯಂ ನೌಕರರಿಗೆ ನೀಡುವ ವಿವಿಧ ತರಬೇತಿಗಳಿಗೆ ನಮ್ಮನ್ನು ನಿಯೋಜನೆಗೊಳಿಸಬೇಕು.ಹಿಂದಿ ಭಾಷಾ ವಿಷಯವನ್ನು ಐಚ್ಚಿಕವಾಗಿ ಇಡದೆ ಕಡ್ಡಾಯವಾಗಿ ಮೂಲ ವಿಷಯವನ್ನಾಗಿ ಪರಿಗಣಿಸಬೇಕುನಮ್ಮನ್ನು ಮುಂದುವರಿಸದೆ ಒಂದು ವೇಳೆ ಪರೀಕ್ಷಾಕ್ರಮವನ್ನು ಮಾಡಿದ್ದೆ ಆದರೆ ಇಡೀ ನಮ್ಮ ಕುಟುಂಬ ಸಮೇತ ಇಲಾಖೆಯ ಮುಂದೆ ನಿರಂತರ ಉಪವಾಸ ಧರಣಿ ಸತ್ಯಾಗ್ರಹವನ್ನು ನಡೆಸಲಾಗುವುದು ಎಂದರು.

ಈ ಸಂದರ್ಭದಲ್ಲಿ ಛತ್ರಪ್ಪ ಬಜಂತ್ರಿ, ವಿಕ್ರಮ ಮುದ್ದೇಬಿಹಾಳ, ಸಾಬಣ್ಣಬಸರಕೋಡ,ಶಿವರಾಜಮಾಲಗತ್ತಿ,ಕುರಿಸಿದ್ದಬಾನು ಹೆಬ್ಬಾಳ, ಅಸ್ಮಾ ಬಾಗವಾನ, ಸಿ. ಮಹಾಂತೇಶ, ಸಿದ್ದಾರ್ಥ ಲಚ್ಯಾಣ, ಸುರೇಶ ವಾಲಿಕಾರ, ಮಹಾಂತೇಶ ಸಲಬಣ್ಣವರ, ಜಿ.ಡಿ. ಬೀಳಗಿ, ವಿ.ಬಿ. ನಾಯಕ, ಸಂಜು, ಬನಸೋಡೆ, ಬಸವರಜ ಜಂಬಗಿ, ಜಬ್ಬಾರ ಕವಠೆ, ಭೀಮಾಶಂಕರ ಸರವಾಡ, ಬರಕತ್ತಲಿ ಮತ್ತಿತರರು ಉಪಸ್ಥಿತರಿದ್ದರು.

# ಗ್ರಂಥ ಮತ್ತು ಗ್ರಂಥಾಲಯ ಮಿತ್ರನಿಗಿಂತಲೂ ಮಿಗಿಲು: ನವ ನಿರ್ಮಿತ ಪ್ರವಾಚಕ ಗ್ರಂಥಾಲಯವ ಉದ್ಘಾಟನೆ



**ಬಾಗಲಕೋಟೆ :** ವಿದ್ಯಾಗಿರಿಯ 22ನೇ ರಸ್ತೆಯ ಮೂರನೇ ಮನೆಯಲ್ಲಿ ಶ್ರೀಮತಿ ಮಮತಾ ಹಾಗೂ ಮಹಾಂತೇಶ ಕೋಟಿ ಶಿಕ್ಷಕ ದಂಪತಿಗಳ ತಮ್ಮ ನವ ನಿರ್ಮಿತ "ಪ್ರವಾಚಕ" ನಿಲಯದ ಗ್ರಹ ಪ್ರವೇಶ ಕಾರ್ಯಕ್ರಮದಲ್ಲಿ ಪ್ರವಾಚಕ ಗ್ರಂಥಾಲಯದ ಅನಾವರಣಗೊಳಿಸಿದರು.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಅಧ್ಯಕ್ಷರಾದ ಡಾ ಚನ್ನಪ್ಪ ಕಟ್ಟಿ ಅವರು ಪ್ರವಾಚಕ ಗ್ರಂಥಾಲಯವನ್ನು ಉದ್ಘಾಟಿಸಿ ಮಾತನಾಡುತ್ತಾ ಮನೆಗೊಂದು ಗ್ರಂಥಾಲಯವಾಗಬೇಕೆಂಬ ಮಹತ್ವಕಾಂಕ್ಷೆಯ ಹಾದಿಯಲ್ಲಿ ಕಾರ್ಯ ಪ್ರವೃತ್ತರಾದ ಕೋಟಿ ಪರಿವಾರದ ಪುಸ್ತಕ ಪ್ರೀತಿಯನ್ನು ಶ್ಲಾಗಿಸಿದರು. ಅಷ್ಟೇ ಅಲ್ಲದೆ ತಮ್ಮ ಸಿಂದಗಿಯ ನೆಲೆ ಪ್ರಕಾಶನ ಪ್ರಕಟಗೊಂಡಿರುವ 50 ಗ್ರಂಥಗಳನ್ನು ಕಾಣಿಕೆ ನೀಡುವುದರ ಮುಖಾಂತರ ಪ್ರೋತ್ಸಾಹಿಸಿದರು.

ವೇದಿಕೆಯ ಕಾರ್ಯಕ್ರಮ ಉದ್ಘಾಟಿಸಿದ ಸಮಾಜದ ದುರೀಣರಾದ ಶ್ರೀ ಜಿ. ಎಂ. ಸಿಂಧೂರ ಅವರು ಗೃಹಪ್ರವೇಶ ದಂತಹ ಕೌಟುಂಬಿಕ ಕಾರ್ಯಕ್ರಮಕ್ಕೆ ಸಾಹಿತ್ಯಿಕ ಮೆರಗು ನೀಡಿದ ಕೋಟಿ ಪರಿವಾರವನ್ನು ಪ್ರಸಂಶಿಸಿದರು. ಅಷ್ಟೇ ಅಲ್ಲದೆ ಪ್ರತಿಯೊಬ್ಬರ ಮನೆಗಳಲ್ಲಿ ಚಿಕ್ಕದಾದ ಒಂದು ಗ್ರಂಥಾಲಯವಾದರೆ ಮಕ್ಕಳಿಗೆ ಒಳ್ಳೆಯ ಸಂಸ್ಕಾರ ದೊರೆಯುತ್ತದೆ ಎಂದರು.

ಇದೇ ಸಮಯದಲ್ಲಿ ಎಸ್. ಜಿ. ಕೋಟಿ ಅವರು ರಚಿಸಿದ "ಮತ್ತೊಂದು ವಡ್ಡಾರಾಧನೆ" ಗ್ರಂಥವನ್ನು ಅಖಿಲ ಭಾರತೀಯ ಸಾಹಿತ್ಯ ಪರಿಷತ್ತಿನ ಪ್ರಧಾನ ಕಾರ್ಯದರ್ಶಿಗಳಾದ ರಘುನಂದನ್ ಭಟ್ಟ ಬನವಾಸಿಯವರು ಪುಸ್ತಕ ಬಿಡುಗಡೆ ಮಾಡಿದರು. ಘಟಪ್ರಭಾ ಕೃಷ್ಣಾ ನದಿ ತೀರದ ಸಂಸ್ಕೃತಿಯನ್ನು ಮೈಗೂಡಿಸಿಕೊಂಡು ಬೆಳೆದಿರುವ ಎಸ್. ಜಿ. ಕೋಟಿಯವರನ್ನು ಬರಲಿರುವ ಜೂನ್ 7 ಮತ್ತು 8ರಂದು ನಡೆಯಲಿರುವ ಅಖಿಲ ಭಾರತೀಯ ಸಾಹಿತ್ಯ ಪರಿಷತ್ತಿನ ನಾಲ್ಕನೇ ದಾವಣಗೆರೆ ಅಧಿವೇಶನಕ್ಕೆ ಸರ್ವಾಧ್ಯಕ್ಷರಾಗಿರುವ ವಿಷಯವನ್ನು ಪ್ರಕಟಿಸಿ ಪರಿಷತ್ ಪರವಾಗಿ ಸನ್ಮಾನಿಸಿದರು. ಇದೇ ಸಂದರ್ಭದಲ್ಲಿ ಉಪಸ್ಥಿತರಿದ್ದ ಜನಮೇಜಯ ಉಮಾರ್ಜಿ ಅಭಿನಂದನ ನುಡಿಗಳನ್ನಾಡಿ ದಾವಣಗೆರೆ ಸಮ್ಮೇಳನಕ್ಕೆ ಆಮಂತ್ರಣದ ಕರೆಯೋಲೆ ನೀಡಿದರು.

ಪತ್ರಕರ್ತರಾದ ಮುಧೋಳದ ಹಿರಿಯ ಸಾಹಿತಿ ಮಲ್ಲಿಕಾರ್ಜುನ ಹೆಗ್ಗಳಗಿಯವರು "ಮತ್ತೊಂದು ವಡ್ಡಾರಾಧನೆ" ಕೃತಿಯನ್ನು ಸಭೆಗೆ ಪರಿಚಯಿಸಿದರು. ಗೌರವ ಪೂರ್ವಕವಾಗಿ ಈ ಕೃತಿಯನ್ನು ಹಿರಿಯ ಸಾಹಿತಿಗಳಾದ ಎಂ ಜಿ ಬಿರಾದಾರ್ ಹಾಗೂ ಕೊಪ್ಪಳ ಜಿಲ್ಲಾ ಮಾಜಿ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ವೀರಣ್ಣ ನಿಂಗೋಜಿಯವರಿಗೆ ಅರ್ಪಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಹಿರಿಯ ಶಿಕ್ಷಣ ಚಿಂತಕರೂ ಸಾಹಿತಿಗಳೂ ಆದ ಶ್ರೀ ಶಿವಶಂಕರ ಹಿರೇಮಠವರು ಸಮಾರೋಪ ನುಡಿಗಳನ್ನು ಆಡಿದರು.

ಕಾರ್ಯಕ್ರಮದಲ್ಲಿ ಕಲ್ಯಾಣಕುಮಾರ ಗೂಗಿ ಲಪ್ರಾರ್ಥಿಸಿದರು. ಮಹಾಂತೇಶ ಕೋಟಿಯವರು ಸ್ವಾಗತಿಸಿದರು. ಜಿ. ಜಿ ಕೋಟಿ ಅವರು ಪ್ರಾಸ್ತಾವಿಕ ನುಡಿಗಳನ್ನಾಡಿದರು. ಶ್ರೀ ಗುರುರಾಜ ಲೂತಿ ಹಾಗೂ ಸಣ್ಣತಂಗಿಯವರು ಕಾರ್ಯಕ್ರಮ ನಿರ್ವಹಣೆ ಮಾಡಿದರು. ಕಾರ್ಯಕ್ರಮದಲ್ಲಿ ಹಿರಿಯರಾದ ಮಲ್ಲಿಕಾರ್ಜುನ ಯಾಳವಾರ, ಎಂ. ಎಸ್. ಬಳಗಾನೂರ, ಸಿಂದಗಿಯ ಎಸ್. ಎಂ. ನಾಗಾವಿ,, ಬೆಳಗಾವಿಯ ಪಿ. ಎಲ್ ಹೂಗಾರ, ಕೊಪ್ಪಳದ ಅಕ್ಬರ್ ಕಾಲಿಮಿರ್ಚಿ, ವೀರಣ್ಣ ನಿಂಗೋಜಿ, ಎಂ. ಡಿ ಬಳ್ಳಾರಿ, ಶ್ರೀಶೈಲ ಕರಿಶಂಕರಿ, ಶ್ರೀ ಎಸ್ ಆರ್ ಮನಹಳ್ಳಿ, ಡಾ ಮಾರುತಿ ಪಾಟೋಳ್ಳಿ, ಎಂ. ಎಸ್. ಮುಂಡರಗಿಯವರು ಉಪಸ್ಥಿತರಿದ್ದು ಶ್ರೀಯುತ ಕೋಟಿ ಅವರನ್ನು ಗೌರವಿಸಿದರು.

# 1 ಕೋಟಿ ಅನುದಾನದ ಸಿಸಿ ರಸ್ತೆ ಕಾಮಗಾರಿಗೆ ಶಾಸಕ ಜೆ.ಟಿ ಪಾಟೀಲ ಭೂಮಿ ಪೂಜೆ



**ಕಲಾದಗಿ :** ಗ್ರಾಮದ ಆಲಗುಂಡಿ ಕಿರಾಣಿ ಅಂಗಡಿಯಿಂದ ಗುರುಲಿಂಗೇಶ್ವರ ಮಠದವರೆಗೆ ಹಾಗೂ ಮೀನುಗಾರು ಓಣಿಯಿಂದ ಮುಷ್ಟಿಗೇರಿ ದ್ಯಾಮವ್ವ ದೇವಿ ದೇವಸ್ಥಾನದವರೆಗೆ ಅಂದಾಜು ಒಂದು ಕೋಟಿ ಅನುದಾನದ ಸಿಸಿ ರಸ್ತೆ ಕಾಮಗಾರಿಗೆ ಭಾನುವಾರ ಶಾಸಕ ಜೆ. ಟಿ. ಪಾಟೀಲ ಭೂಮಿ ಪೂಜೆ ನೆರವೇರಿಸಿದರು. ಗಂಗಾಧರ ಶಿವಾಚಾರ್ಯ ಮಹಾಸ್ವಾಮಿ,ಗ್ರಾಮಪಂಚಾಯಿತಿಅಧ್ಯಕ್ಷೆಖಾತುನಬಿ. ಹಸನ ಅಹಮದ್ ರೋಣ, ಉಪಾಧ್ಯಕ್ಷ ಫಕೀರಪ್ಪ ಮಾದರ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಸವರಾಜ ಸಂಶಿ, ಕೆಪಿಸಿಸಿ ಉಪಾಧ್ಯಕ್ಷ ಎಂ.ಬಿ.ಸೌದಾಗರ, ಪಂಚಾಯತಿ ಅಭಿವೃದ್ಧಿ ಅಧಿಕಾರಿ ಬಿ ಎಲ್ ಹವಾಲ್ದಾರ. ಗ್ರಾಪಂ ಸದಸ್ಯರಾದ ಶ್ಯಾಮ್ ಕಾಳೆ.ಬಾಬು ತೇಲಿ. ಮುನ್ನಾ ಕಲಾಸಿ. ನಾರಾಯಣಗೌಡ ದ್ಯಾವನಗೌಡ್ರ. ಮುಖಂಡರಾದ ಸಂಗಣ್ಣ ಮುಧೋಳ, ಮಲ್ಲಪ್ಪ ಜಮಖಂಡಿ, ಸಲೀಂ ಶೇಕ್, ಬಂದೇನವಾಜ ಸೌದಾಗರ, ನಾಗಪ್ಪ ಗಾಣಿಗೇರ, ಯಲ್ಲಪ್ಪ ಕುಳಗೇರಿ, ಬಸವರಾಜ ಬಿಲಕೇರಿ, ರಮೇಶ ಮಾದರ, ಹನಮಂತ ಗದ್ದನಕೇರಿ. ಪಂಚಾಯತ್ ರಾಜ್ ಇಂಜಿನಿಯರ ವಿಭಾಗದ ಅಧಿಕಾರಿಗಳು ಇದ್ದರು.

# ಆನ್‌ಲೈನ್ ಮೂಲಕ ಭೂ ಸುರಕ್ಷಾ ಸೇವೆ

**ಬಾಗಲಕೋಟೆ :** ರಾಜ್ಯ ಸರಕಾರವು ಭೂ ಸುರಕ್ಷಾ ಯೋಜನೆಯಡಿ ಎಲ್ಲ ತಾಲೂಕಾ ಕಚೇರಿಯ ಅಭಿಲೇಖಾಲಯಗಳ ದಾಖಲೆಗಳು ಮತ್ತು ವಹಿಗಳನ್ನು ಗಣಕೀಕರಣಗೊಳಿಸಲಾಗುತ್ತಿದೆ. ಬಾಗಲಕೋಟೆ ಜಿಲ್ಲೆಯ ಎಲ್ಲ ತಾಲೂಕ ಕಚೇರಿಗಳಲ್ಲಿ ಅಭಿಲೇಖಾಲಯಗಳ ಕಡತ ಮತ್ತು ವಹಿಗಳನ್ನು ಗಣಕೀಕರಣಗೊಳಿಸಲಾಗುತ್ತಿದ್ದು, ಮುಂದಿನ ತಿಂಗಳಲ್ಲಿ ಸಾರ್ವಜನಿಕರಿಗೆ ಈ ಸೇವೆ ಲೋಕಾರ್ಪಣೆಗೊಳ್ಳಲಿದೆ. ಅದಕ್ಕೆ ಪೂರಕವಾಗಿ ಜಿಲ್ಲೆಯಲ್ಲಿ ಪ್ರಾಯೋಗಿಕವಾಗಿ ಇಂದಿನಿಂದಲೇ ದಾಖಲೆಗಳನ್ನು ಆನ್‌ಲೈನ್ ಮೂಲಕ ನೀಡಲು ಅವಕಾಶ ಕಲ್ಪಿಸಲಾಗುತ್ತಿದೆ. ಸಾರ್ವಜನಿಕರು ಇದರ ಸೇವೆಯಸದುಪಯೋಗಪಡೆದುಕೊಳ್ಳಬಹುದಾಗಿದೆ. ಭೂ ಸುರಕ್ಷಾ ಸೇವಾ ವಿತರಣೆ ಸ್ವಯಂ ಸೇವಾ ಪೋರ್ಟಲ್ http://recordroom.karnataka.gov.in/service4 ನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. ಪೋರ್ಟಲ್‌ನಲ್ಲಿ ಮೊದಲು ನಿಮ್ಮ ಮೊಬೈಲ್ ಸಂಖ್ಯೆಯೊಂದಿಗೆ ಲಾಗಿನ್ ಮಾಡಿಕೊಂಡುಮೂಲಅರ್ಜಿದಾರರುವಿವರಗಳನ್ನು ಒದಗಿಸಬೇಕು. ಡಾಕ್ಯೂಮೆಂಟ್ ಹುಡುಕಿ ಡಾಕ್ಯೂಮೆಂಟ್‌ನಿಂದ ಅಗ್ಯವಿರುವ ಪುಟಗಳನ್ನು ಆಯ್ಕೆ ಮಾಡಬೇಕು. ಪುಟಗಳನ್ನು ಇಚ್ಛೆ ಪಟ್ಟಿಗೆ ಸೇರಿಸಿ ದಾಖಲೆ ಪೂರ್ವ ವೀಕ್ಷಣೆ ಮಾಡಿ, ಆನ್‌ಲೈನ್ ಪಾವತಿ ಮಾಡಬೇಕು. ನಂತರ ಡಾಕ್ಯೂಮೆಂಟ್ ಡೌನ್‌ಲೋಡ ಮಾಡಿಕೊಳ್ಳಬಹುದಾಗಿದೆ ಎಂದು ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಬಾಗಲಕೊಟೆಯಲ್ಲಿ ಬೃಹತ್ ತಿರಂಗಾ ಯಾತ್ರೆ। ಮಠಾಧೀಶರು, ಮಾಜಿ ಸೈನಿಕರು ಜನಪ್ರತಿನಿಧಿಗಳು, ವಿದ್ಯಾರ್ಥಿಗಳು ಬಾಗಿ

# ಭಾರತದ ಉತ್ತರಕ್ಕೆ ವಿಶ್ವವೇ ಜಾಗೃತವಾಗಿವೆ

**ಬಾಗಲಕೋಟೆ :** ದೇಶದ ರಕ್ಷಣೆಗಾಗಿ ನಮ್ಮೆಲ್ಲರ ನಡೆ ಎಂಬ ದ್ಯೇಯವಾಕ್ಯದೊಂದಿಗೆ ಬೃಹತ ತಿರಂಗಾ ಯಾತ್ರೆಯಶಸ್ವಿಯಾಯಿತು. ನಗರದ ಬಿ.ವಿ.ವಿ.ಸಂಘದ ಆವರಣದಲ್ಲಿರುವ ಶ್ರೀ ಬೀಳೂರ ಅಜ್ಜನ ದೇವಸ್ಥಾನದಿಂದ ಪ್ರಾರಂಭವಾದ ಬೃಹತ ತಿರಂಗಾ ಯಾತ್ರೆ ಪಶು ಆಸ್ಪತ್ರೆ, ಟೀಕಿನ ಮಠದ ರಸ್ತೆ, ಅಡತ ಬಜಾರ, ವಲ್ಲಬಾಯಿ ಚೌಕ,ಪೋಲೀಸ್ ಚೌಕ್ ಮುಖಾಂತರ ಮಹಾತ್ಮಾ ಗಾಂಧಿ ರಸ್ತೆ ಮೂಲಕ ಬಸವೇಶ್ವರ ವೃತ್ತದಲ್ಲಿ ಸಮಾವೇಶಗೊಂಡಿತು.

ನಂತರ ಬಸವೇಶ್ವರ ವೃತ್ತದಲ್ಲಿ ಸಾರ್ವಜನಿಕರನ್ನುದ್ದೇಶಿಸಿ ಮಾತನಾಡಿದ ಸಂಸದ ಪಿ,ಸಿ,ಗದ್ದಿಗೌಡರ ಪಾಕಿಸ್ತಾನದಲ್ಲಿ ಉಗ್ರಗಾಮಿಗಳನ್ನು ತಯಾರು ಮಾಡುವ ನೆಲೆಗಳನ್ನು ಕೇವಲ 27 ಸೆಕೆಂಡಗಳಲ್ಲಿ ನಮ್ಮ ಯೋಧರು ಧ್ವಂಸಗೊಳಿದ್ದಾರೆ, ದೇಶದ ವ್ಯವಸ್ಥೆಯನ್ನು ಬುಡಮೇಲು ಮಾಡುವ ದುರಾಲೋಚನೆ ಇದಕ್ಕೆ ಸೈನಿಕರು ತಕ್ಕ ಪಾಠ ಕಲಿಸಿದ್ದಾರೆ, ಹಾಗಾಗಿ ಪ್ರಧಾನಿ ಮೋದಿಯವರ ನಾಯಕತ್ವದಲ್ಲಿ ನೀಡಿರುವ ತಕ್ಕ ಉತ್ತರವನ್ನು ಇಡಿ ವಿಶ್ವವೇ ನೋಡಿದೆ ಎಂದರು.

ಗುಳೆದಗುಡ್ಡದ ಒಪ್ಪತ್ತೇಶ್ವರಮಠದ ಪೂಜ್ಯಶ್ರೀ ಒಪ್ಪತ್ತೇಶ್ವರಸ್ವಾಮಿಗಳು ಮಾತನಾಡಿ ಭಾರತ ಶಾಂತಿಪ್ರೀಯ ದೇಶವಾದರು ನಮ್ಮನ್ನು ತುಳಿಯಲು ಬಂದವರನ್ನು ಸುಮ್ನೆ ಬಿಡುವ ದೇಶವಲ್ಲಾ ಎನ್ನುವ ಎಚ್ಚರಿಕೆಯನ್ನು ಈ ಆಪ್ರೇಶನ ಸಿಂಧೂರ ಮಾಡಿದೆ, ಗುಡಿಯೋಳಗಿನ ದೇವರಗಿಂತ ಗಡಿಯೋಳಗಿನ ದೇವರು ದೊಡ್ಡವ ಎನ್ನುವು ಹಾಗೆ ಗಡಿಯಲ್ಲಿನ ಸೈನಿಕರಿಂದಾಗಿ ನಾವೆಲ್ಲ ಇಂದು ಸುರಕ್ಷಿತವಾಗಿದ್ದೆವೆ, ಅಂಥ ಸೈನಿಕರಿಗೆ ಶಕ್ತಿತುಂಬುವಇಂಥಹತಿರಂಗಯಾತ್ರೆ ಮಾಡಿದ್ದು ಶ್ಲಾಘನೀಯ ಎಂದರು.

ತಿರಂಗಾ ಯಾತ್ರೆಯ ನೇತೃತ್ವದ ಸಾನಿದ್ಯ ವಹಿಸಿದ ಚರಂತಿಮಠದ ಪೂಜ್ಯಶ್ರೀ ಪ್ರಭುಸ್ವಾಮಿಗಳು ಮಾತನಾಡಿ



ಆಪರೇಶನ ಸಿಂಧೂರ ಇದು ಭಾರತ ಮಹಿಳೆಯರ ಗೌರವದ ಸಿಂಧೂರ, ಬಾರಿ ವ್ಯವಸ್ಥೆಯ ಮೂಲಕ ಜನರನ್ನು ಗುರಿಯಾಗಿಸದೆಉಗ್ರರರನ್ನುಹಾಗೂ ಉಗ್ರರ ನೇಲೆಗಳ ಮೇಲೆ ದಾಳಿ ಮಾಡಿ ಧ್ವಂಸಗೊಳಿಸಿರುವುದನ್ನು ಇಡಿ ಜಗತ್ತೆ ಮೆಚ್ಚಿಕೊಂಡಿದೆ, ಆಪರೇಶನ ಸಿಂಧೂರದ ಮೂಲಕ ಜಗತ್ತಿಗೆ ಭಾರತದ ಶಕ್ತಿ ಸಾಮರ್ಥ್ಯ ಗೋತ್ತಾಗಿದೆ, ಜೋತಗೆ ಅನೇಕ ದೇಶಗಳಿಗೆನಡುಕ ಉಂಟುಮಾಡಿದೆ, ಜಗತ್ತಿನಬಹುತೆಕದೇಶಗಳುಭಾರತದ ಬೆಂಬಲಕ್ಕೆ ನಿಂತಿವೆ, ಇಂದಿನ ಪ್ರಧಾನಿ ನರೇಂದ್ರ ಮೋದಿಯವರು ಬಹಳ ದೂರದೃಷ್ಟಿಯನ್ನು ಇಟ್ಟುಕೊಂಡ ಉತ್ತಮ ಹೆಜ್ಜೆಯನ್ನು ಇಡುತ್ತಿದ್ದಾರೆ, ಅಪರೇಶನ ಸಿಂಧೂರ ಇದು ಭಾರತೀಯರು ಹೆಮ್ಮೆ ಪಡುವಂತಹ ಕೆಲಸವಾಗಿದೆ, ಸೈನಿಕರಿಗೆ ಅತ್ಮಸ್ಥೈರ್ಯ ಶಕ್ತಿಯನ್ನು ತುಂಬುವ ಸಲುವಾಗಿ ಈ ತಿರಂಗಾ

> **ದೂರದೃಷ್ಟಿಯನ್ನು ಇಟ್ಟುಕೊಂಡು ನಡೆಸಿದ ಅಪರೇಶನ ಸಿಂಧೂರದಿಂದ ಇಡಿ ಜಗತ್ತಿಗೆ ಭಾರತದ ಶಕ್ತಿ ಸಾಮರ್ಥ್ಯದ ಅರಿವು ಆಗಿದೆ.**
> । ಡಾ. ವೀರಣ್ಣ ಚರಂತಿಮಠ
> ಕಾರ್ಯಾಧ್ಯಕ್ಷರು.
> ಬಿ.ವಿ.ವಿ.ಸಂಘ ಬಾಗಲಕೋಟೆ

ಯಾತ್ರೆ ನೀಜಕ್ಕೂ ಆತ್ಮವಿಶ್ವಾಸವನ್ನು ತುಂಬಿದೆ, ಇಂದಿನ ಯುವಶಕ್ತಿಗೆ ದೇಶಭಕ್ತಿಯ ಅರಿವು ಸಲುವಾಗಿ ವಿದ್ಯಾರ್ಥಿ ದೇಸೆಯಲ್ಲಿ ಎನ,ಸಿ,ಸಿ ಯಲ್ಲಿ ಭಾಗವಹಿಸುವಂತ ಕಾರ್ಯಕ್ಕೆ ಮುಂದಾಗಬೇಕು ಎಂದರು.

ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ ಹಾಗೂ ಬಿಜೆಪಿ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ ಮಾತನಾಡಿದರು. ಅಮೀನಗಡದ ಮಾತೆ ಮಾಣಿಕೇಶ್ವರಿ ಅಮ್ಮನವರು, ಮಾಜಿ ಶಾಸಕರಾದ ಡಾ. ವೀರಣ್ಣ ಚರಂತಿಮಠ,ನಂದು ಗಾಯಕವಾಡ, ಕ್ಯಾಪ್ಟನ್ ಕೋರಿ,ಸೇರಿದಂತೆ ವೀರ ಯೋಧರು, ನಿವೃತ್ತ ಯೋಧರು ಇದ್ದರು.

**ಗಮನ ಸೇಳೆದ ತಿರಂಗಾ :** ಬಾಗಲಕೋಟೆಯಲ್ಲಿ ಬಿಜೆಪಿ ತಿರಂಗಾ ಯಾತ್ರೆಯಲ್ಲಿ ಸುಮಾರು 300 ಅಡಿ ಉದ್ದದ ತಿರಂಗಾ ಧ್ವಜದ ಮನಮೋಹಕ ಯಾತ್ರೆ ಜನರ ಗಮನ ಸೇಳೆಯಿತು. ಬೀಳೂರ ಅಜ್ಜನ ದೇವಸ್ಥಾನದಲ್ಲಿ ಚರಂತಿಮಠದ ಪೂಜ್ಯಶ್ರೀ ಪ್ರಭುಸ್ವಾಮಿಗಳು,ಸಂಸರಾದ ಪಿ.ಸಿ.ಗದಿಗೌಡರ.ರಾಜ್ಯ ಡಾ.ವೀರಣ್ಣ ಚರಂತಿಮಠ.ಬಿಜೆಪಿ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ ಅವರು ತಿರಂಗಾ ಯಾತ್ರೆಗೆ ಚಾಲನೆ ನೀಡಿದರು, ತಿರಂಗಾ ಯಾತ್ರೆಯಲ್ಲಿ ಎನ್.ಸಿ.ಸಿ ವಿದ್ಯಾರ್ಥಿಗಳು, ಅಕ್ಕನ ಬಳಗದ ಸದಸ್ಯರು, ಮಹಿಳಾ ಸ್ವ ಸಹಾಯ ಸಂಘಗಳಿ, ವಕೀಲರ ಸಂಘ, ವೈಧ್ಯರ ಸಂಘ, ರೋಟರಿ ಹಾಗೂ ಲೈನ್ಸಕ್ಲಭ ಸೇರಿದಂತೆ ಅನೇಕ ಸಂಘ ಸಂಸ್ಥೆಗಳು, ವಿದ್ಯಾರ್ಥಿ ವಿದ್ಯಾರ್ಥಿನಿಯರು ಸೇರಿದಂತೆ 6 ಸಾವಿರಕ್ಕೂ ಹೆಚ್ಚು ಜನರು ಭಾಗವಹಿಸಿದ್ದರು.

# ಸಂಭ್ರಮದ ಹಾಲೋಕಳಿ




**ಬನಹಟ್ಟಿ :** ಸಮೀಪದ ಆಸಂಗಿ ಗ್ರಾಮದಲ್ಲಿ ಹನುಮಾನ ದೇವರ ಹಾಗೂ ಲಕ್ಕವ್ವ ದೇವಿ ಜಾತ್ರೆಯ ನಿಮಿತ್ಯ ಗ್ರಾಮೀಣ ಪರಂಪರೆಯನ್ನು ಬಿಂಬಿಸುವ ಸಂಭ್ರಮದ ಹಾಲೋಕಳಿ ಕಾರ್ಯಕ್ರಮ ಜರುಗಿತು.

ಸಂಜೆ ಜರುಗಿದ ಹಾಲೋಕಳಿ ಸಂದರ್ಭದಲ್ಲಿ ಹಾಲಗಂಬ ಏರಲು ಅನೇಕ ಯುವಕರು ಹರಸಹಾಸ ಮಾಡಿದರು. ಇವರು ಹಾಲಗಂಬ ಏರುತ್ತಿದ್ದಂತೆ ಮೇಲೆ ಕುಳಿತವರೊಬ್ಬರು ಕಂಬದಿಂದ ಜಾರಲೆಂದೇ ಹಾಲು, ತುಪ್ಪ, ಬಾಳೆಹಣ್ಣಿನ ರಸ ಸೇರಿದಂತೆ ಇನ್ನಿತರ ಪದಾರ್ಥಗಳನ್ನು ಎರಚಿದರು. ಇವೆಲ್ಲವನ್ನು ಧಿ:ಕ್ಕರಿಸಿ ಯುವಕರು ಕೊನೆಗೂ ಮೇಲೇರಿ ಯಶಸ್ಸು ಕಂಡರು.

ಈ ಸಂದರ್ಭದಲ್ಲಿ ತವನಪ್ಪ ಕೋರಿ, ಹರ್ಷವರ್ಧನ ಪಟವರ್ಧನ, ಧೋಂಡಿಬಾ ಗಾಯಕವಾಡ, ಬಸವರಾಜ ಖೇಮನ್ನವರ, ಲಕ್ಕಪ್ಪ ಶಿರಹಟ್ಟಿ, ರಾಜು ಪಾಟೀಲ ಸೇರಿದಂತೆ ಆಸಂಗಿ, ಅಸ್ಕಿ ಗ್ರಾಮ ಮತ್ತು ಸುತ್ತಮುತ್ತಲಿನ ಅಪಾರ ಪ್ರಮಾಣದ ಜನಸ್ತೋಮ ನೆರೆದಿತ್ತು.

# ಸಹಕಾರ ಸಂಘ ರೈತ, ನೇಕಾರರಿಗೆ ವರವಾಗಲಿ



**ರಬಕವಿ-ಬನಹಟ್ಟಿ :** ಸಹಕಾರ ಸಂಘಗಳು ರೈತರಿಗೆ ಹಾಗು ನೇಕಾರ ಸಮುದಾಯಕ್ಕೆ ಹೆಚ್ಚಿನ ಆರ್ಥಿಕ ಸಹಾಯ ಒದಗಿಸುತ್ತ ಅವುಗಳಿಗೆ ವರದಾನವಾಗಬೇಕೆಂದು ತೇರದಾಳ ಶಾಸಕ ಸಿದ್ದು ಸವದಿ ಹೇಳಿದರು.

ಬನಹಟ್ಟಿಯ ಮಹೇಶ ಸಹಕಾರಿ ಸಂಘದ ಪೂಜಾ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು,

ನೇಕಾರ ಪ್ರಧಾನ ತಾಲೂಕಾಗಿರುವ ರಬಕವಿ-ಬನಹಟ್ಟಿಯಲ್ಲಿ ನೂರಾರು ಸಹಕಾರಿ ಸಂಘಗಳು ಕಾರ್ಯ ನಿರ್ವಹಿಸುತ್ತಿದ್ದು, ಆರ್ಥಿಕವಾಗಿ ನೇಕಾರಿಗೆ ಅನುಕೂಲ ಮಾಡಿಕೊಡುತ್ತಿವೆ. ಮುಂದಿನ ದಿನಗಳಲ್ಲಿ ಹಲವಾರು ಯೋಜನೆಗಳನ್ನು ರೂಪಿಸಿಕೊಂಡು ಸಮಾಜಮುಖಿ ಕಾರ್ಯಕ್ಕೆ ಮತ್ತಷ್ಟು ಒತ್ತು ನೀಡುವಲ್ಲಿ ಸಹಕಾರಿ ಕ್ಷೇತ್ರ ಬೆಳೆಯ ಬೇಕೆಂದರು.

ಸಂಘದ ಅಧ್ಯಕ್ಷ ಸುರೇಶ ಚಿಂಡಕ ಮಾತನಾಡಿ, ಕಡಿಮೆ ಅವಧಿಯಲ್ಲಿ ಮಹೇಶ ಸೌಹಾರ್ದವು ಕೋಟ್ಯಂತರ ರೂ. ಗಳ ವಹಿವಾಟಿನೊಂದಿಗೆ, ಮೂವತ್ತು ಕೋಟಿಯಷ್ಟು ಠೇವು ಹಾಗು ಇಪ್ಪತ್ತು ಕೋಟಿಯಷ್ಟು ಸಾಲ ವಿತರಿಸುವ ಮೂಲಕ ರೂ. ಅರವತ್ತು ಲಕ್ಷಕ್ಕೂ ಅಧಿಕ ಲಾಭ ಗಳಿಸುವ ಮೂಲಕ ಸಾಧನೆ ಮಾಡಿದೆ ಎಂದರು.

ಇದೇ ಸಂದರ್ಭ ವಿಜಯಕುಮಾರ ಮಾಲಪಾನಿ, ಓಂಪ್ರಕಾಶ ಕಾಬ್ರಾ, ನಂದಕಿಶೋರ ಕರವಾ, ಗೋವಿಂದ ಡಾಗಾ, ನಾರಾಯಣ ಮಾಲಪಾನಿ, ಕಮಲಕಿಶೋರ ಮಾಲಪಾನಿ, ಚಂಗನಲಾಲ ತೋಶನಿವಾಲ, ದ್ವಾರಕಾದಾಸ ಕಾಸಟ, ದೇವರಾಜ ರಾಠಿ, ಬ್ರಿಜ್ಮೋಹನ ಡಾಗಾ, ಗೋವಿಂದ ಡಾಗಾ, ಧರೆಪ್ಪ ಉಳ್ಳಾಗಡ್ಡಿ, ಗೋಪಾಲ ಭಟ್ಟಡ, ಶ್ಯಾಮ ಲೋಯಾ ಸೇರಿದಂತೆ ಇನ್ನೂ ಅನೇಕರು ಪಾಲ್ಗೊಂಡಿದ್ದರು.

## ವಾರದ ಸತ್ಸಂಗ ಕಾರ್ಯಕ್ರಮ

# ತಂದೆ, ತಾಯಿ, ಗುರುಗಳ ಕೃಪೆ ಮರೆಯದಿರಿ: ಸಹಜಾನಂದ ಸ್ವಾಮಿಜಿ



**ಮಹಾಲಿಂಗಪುರ :** ವಿದ್ಯಾರ್ಥಿಗಳು ಜನ್ಮ ನೀಡಿದ ತಂದೆ-ತಾಯಿ, ವಿದ್ಯೆ ಕಲಿಸಿದ ಗುರುಗಳ ಕೃಪೆಯನ್ನು ಎಂದಿಗೂ ಮರೆಯದೆ, ಅವರಿಗೆ ವಿಧೇಯರಾಗಿದ್ದು ಸಾಧನೆ ಮಾಡಬೇಕು ಎಂದು ಸಹಜಾನಂದ ಸ್ವಾಮಿಜಿ ಹೇಳಿದರು.

ಪಟ್ಟಣದ ಸಿದ್ಧಾರೂಢ ಬ್ರಹ್ಮವಿದ್ಯಾಶ್ರಮದಲ್ಲಿ ಶನಿವಾರ ರಾತ್ರಿ ಜರುಗಿದ ವಾರದ ಸತ್ಸಂಗ ಕಾರ್ಯಕ್ರಮದಲ್ಲಿ ಬಸವಾನಂದ ಶಾಲೆಯ ಎಸ್.ಎಸ್.ಎಲ್.ಸಿ. ವಾಷಿ9ಕ ಪರಿಕ್ಷೆಯಲ್ಲಿನ ಸಾಧಕ ವಿದ್ಯಾರ್ಥಿಗಳನ್ನು ಮತ್ತು ಅವರ ಸಾಧನೆಗೆ ಶ್ರಮಿಸಿದ ಶಿಕ್ಷಕರನ್ನು ಸನ್ಮಾನಿಸಿ ಮಾತನಾಡಿದ ಅವರು ಎಸ್.ಎಸ್.ಎಲ್.ಸಿ.ಯು ವಿದ್ಯಾರ್ಥಿಗಳ ಶೈಕ್ಷಣಿಕ ಜೀವನದ ಮಹತ್ವದ ಘಟ್ಟವಾಗಿದೆ. ಎಸ್.ಎಸ್.ಎಲ್.ಸಿ. ಯ ನಂತರ ವಿದ್ಯಾರ್ಥಿಗಳಿಗೆ ಬಹು ಆಯ್ಕೆಗಳು ಇರುವುದರಿಂದ ಸರಿಯಾದ ಮಾರ್ಗವನ್ನು ಆಯ್ಕೆ ಮಾಡಿಕೊಂಡು ಶೈಕ್ಷಣಿಕ ಜೀವನದಲ್ಲಿ ಸಮಯವನ್ನು ವ್ಯರ್ಥ ಮಾಡದೇ ಶ್ರದ್ಧಾ, ಭಕ್ತಿಯಿಂದ ಅಧ್ಯಯನ ಮಾಡಿ ಗುರಿ ಸಾಧನೆ ಮಾಡಬೇಕು.

ಬಹುಮುಖ್ಯವಾಗಿ ಯಾವುದೇ ದುಶ್ಚಟಗಳಿಗೆ ಬಲಿಯಾಗದೇ ಸಾತ್ವಿಕ ಜೀವನ ನಡೆಸಬೇಕು ಎಂದರು.

ಶರಣ ಮಲ್ಲೇಶಪ್ಪ ಕಟಗಿ, ಡಾ. ಬಿ. ಡಿ. ಸೋರಗಾಂವಿ ಮಾತನಾಡಿ ಪಟ್ಟಣದ ಬಸವಾನಂದ ಪ್ರೌಢಶಾಲೆಯು ಕಳೆದ 19 ವರ್ಷಗಳಿಂದ ನೂರಕ್ಕೆ ನೂರು ಫಲಿತಾಂಶ ಪಡೆಯುತ್ತಿರುವದು ಸ್ವಾಗತಾರ್ಹ. ವಿದ್ಯಾರ್ಥಿಗಳ ಈ ಸಾಧನೆಗೆ ಬೆನ್ನೆಲುಬಾಗಿ ನಿಂತ ಎಲ್ಲಾ ಶಿಕ್ಷಕರ ಶ್ರಮವು ಅಭಿನಂದನಾರ್ಹ ಎಂದರು.

ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇ. 85% ಕ್ಕಿಂತ ಹೆಚ್ಚಿನ ಅಂಕ ಪಡೆದ ಬಸವಾನಂದ ಶಾಲೆಯ ಹದಿನೈದಕ್ಕೂ ಅಧಿಕ ವಿದ್ಯಾರ್ಥಿಗಳನ್ನು ಸಿದ್ಧಾರೂಢ ಬ್ರಹ್ಮವಿದ್ಯಾಶ್ರಮದ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.

ಮುಖ್ಯ ಶಿಕ್ಷಕರಾದ ಎಸ್. ಕೆ. ಗಿಂಡೆ, ಎಸ್. ಎಂ. ಮುಗಳಖೋಡ, ಶಿಕ್ಷಕರಾದ ಸಿ. ಎ. ಫಡತಾರೆ, ಶ್ರೀನಿವಾಸ ಕಾಂಬಳೆಕರ, ಶ್ರೀಮತಿ ವ್ಹಿ. ಎ. ಕಾಗಿ, ಸಿ. ವ್ಹಿ. ಹುಣಶ್ಯಾಳ, ಮಲ್ಲಪ್ಪ ಗರದ ಅವರನ್ನು ಸಿದ್ಧಾರೂಢ ಆಶ್ರಮದ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.

ಆಶ್ರಮದ ಧರ್ಮದರ್ಶಿ ಲಕ್ಕಪ್ಪ ಚಮಕೇರಿ, ಸದ್ಭಕ್ತರಾದ ಸಿದ್ರಾಮಯ್ಯ ಗೋಠೆ, ಮಹಾಲಿಂಗಪ್ಪ ಕರೆಹೊನ್ನ, ಮಲ್ಲಪ್ಪ ಯಾದವಾಡ, ಹಣಮಂತ ಮೀರಾಪಟ್ಟಿ, ಮಹೇಶ ಇಟಕನ್ನವರ, ಚನ್ನಪ್ಪ ಗೂಗಾಡ, ಚನ್ನಪ್ಪ ಚಂಡೋಲ, ಉದ್ದಪ್ಪ ನಿಲಾರಿ, ಮೆಹಬೂಬ ಸನದಿ, ಶಂಕರ ನಿಲಾರಿ, ಕುಮಾರ ಉಳ್ಳಾಗಡ್ಡಿ ಸೇರಿದಂತೆ ಇನ್ನೂ ಹಲವರು ಉಪಸ್ಥಿತರಿದ್ದರು.

# ಚಂದ್ರಕಾಂತ ಬೆಲ್ಲದ ತಂಡದಿಂದ ಮತ ಯಾಚನೆ



**ಗದಗ :** ಧಾರವಾಡದ ಪ್ರತಿಷ್ಠಿತ ಕರ್ನಾಟಕ ವಿದ್ಯಾವರ್ಧಕ ಸಂಘದ ತ್ರೈವಾರ್ಷಿಕ ಚುನಾವಣೆಯು ಇದೆ ಮೇ.25 ರಂದು ನಡೆಯಲಿರುವ ಹಿನ್ನೆಲೆಯಲ್ಲಿ ಶ್ರೀ ಚಂದ್ರಕಾಂತ ಬೆಲ್ಲದ ಮತ್ತು ಮಕ್ಕಳ ಮಹರ್ಷಿ ಶಂಕರ ಹಲಗತ್ತಿ ಅವರ ತಂಡವು ಗದಗ ನಗರಕ್ಕೆ ಆಗಮಿಸಿ ಸದಸ್ಯರಲ್ಲಿ ಮತಯಾಚನೆ ಮಾಡಿದರು.

ಪ್ರಧಾನ ಕಾರ್ಯದರ್ಶಿ ಸ್ಥಾನದ ಅಭ್ಯರ್ಥಿ ಶ್ರೀ ಶಂಕರ ಹಲಗತ್ತಿ, ವೀರಣ್ಣ ಒಡ್ಡೀನ, ಡಾ.ಜಿನದತ್ತ ಹಡಗಲಿ, ಶಿವಾನಂದ ಭಾವಿಕಟ್ಟಿ, ಡಾ.ಧನವಂತ ಹಾಜವಗೋಳ ಅವರ ತಂಡವು ಪಂಚಾಕ್ಷರ ಗವಾಯಿಗಳ ಪದವಿ ಮಹಾವಿದ್ಯಾಲಯಕ್ಕೆ ಭೇಟಿ ನೀಡಿ ಮೂರು ವರ್ಷಗಳ ಅವಧಿಯಲ್ಲಿ ಕೈಕೊಂಡಿದ್ದ ಕಾರ್ಯಗಳ ಕುರಿತು ವಿವರಿಸಿದರಲ್ಲದೆ ತಮ್ಮ ಮತಗಳಲ್ಲದೆ ಇತರ ಸದಸ್ಯರ ಮತಗಳನ್ನು ಚಂದ್ರಕಾಂತ ಬೆಲ್ಲದ ಅವರ ಗುಂಪಿಗೆ ಹಾಕಿಸುವ ಮೂಲಕ ಗುಂಪಿನ ಎಲ್ಲ ಹದಿನೈದು ಸದಸ್ಯರನ್ನೂ ಬೆಂಬಲಿಸಿ ಆಯ್ಕೆ ಮಾಡುವಂತೆ ಮನವಿ ಮಾಡಿದರು. ಈ ಸಂದರ್ಭದಲ್ಲಿ ಪಿಪಿಜಿ ಮಹಾವಿದ್ಯಾಲಯದ ಪ್ರಾಚಾರ್ಯ ಡಾ.ರಾಜಶೇಖರ ದಾನರಡ್ಡಿ, ಪ್ರೊ.ಬಸವರಾಜ ಪೂಜಾರ್, ಪ್ರೊ.ಬಾಹುಬಲಿ ಜೈನರ, ನಿವೃತ್ತ ಪ್ರಾಚಾರ್ಯ ವಿ.ಎಂ.ಗುರುಮಠ, ನಿವೃತ್ತ ಪ್ರಾಚಾರ್ಯ ಡಾ.ಪ್ರಭು ಗಂಜಿಹಾಳ ಮೊದಲಾದವರಿದ್ದರು.

**– ಡಾ. ಪ್ರಭು ಗಂಜಿಹಾಳ ಮೊ–9448775346**

# ತೆರಬಂಡಿ ಸ್ಪರ್ಧೆ: ಶಿರೋಳದ ಲಕ್ಷ್ಮೀದೇವಿ ಎತ್ತುಗಳು ಪ್ರಥಮ



**ಮಹಾಲಿಂಗಪುರ :** ಶಿವಶರಣೆ ಹೇಮರಡ್ಡಿ ಮಲ್ಲಮ್ಮ ಜಯಂತಿ ಪ್ರಯುಕ್ತ ಹೇಮವೇಮ ಯುವಕ ಮಂಡಳಿ ವತಿಯಿಂದ ಹಾಲಲ್ಲು ಮತ್ತು ಎರಡಲ್ಲಿನ ಹೋರಿಗಳ ತೆರಬಂಡಿ ಸ್ಪರ್ಧೆಯನ್ನು ಸ್ಥಳೀಯ ಸಿದ್ಧಪ್ಪಗೌಡ ನಗರದಲ್ಲಿ ಹಮ್ಮಿಕೊಳ್ಳಲಾಗಿತ್ತು.

ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ ಜೋಡೆತ್ತುಗಳಲ್ಲಿ ಶಿರೋಳದ ಲಕ್ಷ್ಮೀದೇವಿ ಜೋಡೆತ್ತು ಪ್ರಥಮ, ದಾಸನಾಳದ ಜೈ ಹನುಮಾನ್ ಜೋಡೆತ್ತು ದ್ವಿತೀಯ, ಅಕ್ಕಿಮರಡಿಯ ರೇಣುಕಾದೇವಿ ಜೋಡೆತ್ತು ತೃತೀಯ ಹಾಗೂ ದಾಸನಾಳದ ಆಂಜನೇಯ, ಶಿರೋಳದ ವೀರಭದ್ರೇಶ್ವರ, ಮುಧೋಳದ ಚಂದ್ರಗಿರಿದೇವಿ, ಹೊಸ ಯರಗುದ್ರಿಯ ಈರಲಿಂಗೇಶ್ವರ, ಮುಗಳ್ಯಾಳದ ಲಕ್ಷ್ಮೀದೇವಿ, ಬೆಳಗಲಿಯ ಬಂದಲಕ್ಷ್ಮೀದೇವಿ, ಚಿಮ್ಮಡದ ಪ್ರಭುಲಿಂಗೇಶ್ವರ, ಬೆಳಗಲಿಯ ಲಕ್ಷ್ಮೀದೇವಿ, ಮಿರ್ಜಿಯ ಶ್ರೀರಾಮ ಜೋಡೆತ್ತುಗಳು ಸಮಾಧಾನಕರ ಬಹುಮಾನ ಪಡೆದವು.

ಪುರಸಭೆ ಅಧ್ಯಕ್ಷ ಯಲ್ಲನಗೌಡ ಪಾಟೀಲ ತೆರಬಂಡಿ ಸ್ಪರ್ಧೆ ಉದ್ಘಾಟಿಸಿ ಮಾತನಾಡಿ, ಮಲ್ಲಮ್ಮ ಜಯಂತಿ ಪ್ರಯುಕ್ತ ಇದೇ ಮೊದಲ ಬಾರಿಗೆ ಕಿರಿಯ ವಯಸ್ಸಿನ ಯುವಕರು ಸೇರಿಕೊಂಡು ರೈತ ಮತ್ತು ಎತ್ತುಗಳನ್ನು ಗೌರವಿಸುವ, ಪ್ರೋತ್ಸಾಹಿಸುವ ತೆರಬಂಡಿ ಸ್ಪರ್ಧೆ ಆಯೋಜಿಸಿದ್ದು ಸ್ವಾಗತಾರ್ಹ ಎಂದರು. ಮಹಾಲಿಂಗಪ್ಪ ತಟ್ಟಿಮನಿ, ಲಕ್ಷ್ಮಣಗೌಡ ಪಾಟೀಲ, ವಿಜುಗೌಡ ಪಾಟೀಲ, ಎಸ್. ಎಂ. ಉಳ್ಳೇಗಡ್ಡಿ, ವಿಠ್ಠಲಗೌಡ ಕುಳಲಿ ಸೇರಿದಂತೆ ಹಲವರು ನಗದು ಬಹುಮಾನ ಮತ್ತು ಟ್ರೋಫಿ ವಿತರಿಸಿದರು. ರವಿಗೌಡ ಪಾಟೀಲ, ಮುದಿಗೌಡ ಪಾಟೀಲ ಅವರ ಮಾರ್ಗದರ್ಶನದಲ್ಲಿ ಶ್ರೀಶೈಲಗೌಡ ಪಾಟೀಲ, ಸೋಮಲಿಂಗ ಸಂಗನ್ನವರ, ಮಹಾಂತೇಶ ಪಾಟೀಲ, ಶಿವಕುಮಾರ ಪಾಟೀಲ, ಶ್ರೀನಿವಾಸ ಪಾಟೀಲ, ಸಚಿನ್ ಪಾಟೀಲ, ಅಭಿಷೇಕ ಪಾಟೀಲ, ಕಿರಣ ಪಾಟೀಲ, ಸಾಗರ ತಟ್ಟಿಮನಿ, ಶಂಕರ ಕೆಂಪವಾಡ, ಮಹಾಲಿಂಗ ಕೆಂಪವಾಡ, ಹನಮಂತ ಪಾಟೀಲ, ಸಿದ್ದನಗೌಡ ಪಾಟೀಲ, ಸಾಗರ ಹಟ್ಟಿ, ಚೇತನ ಖೋತ, ವಿನೋದ ಖೋತ ಸ್ಪರ್ಧೆಯನ್ನು ಸಂಘಟಿಸಿದ್ದರು.

# ಅಗರಖೇಡ ಗ್ರಾಮ ಪಂಚಾಯ್ತಿಗೆ ಬೀಗ, ರಸ್ತೆ ತಡೆದು ಗ್ರಾಮಸ್ಥರಿಂದ ಪ್ರತಿಭಟನೆ




**ಇಂಡಿ :** ತಾಲ್ಲೂಕಿನ ಆಗರ ಅಗರಖೇಡ ಪಂಚಾಯತಿಗೆ ಗ್ರಾಮಸ್ಥರು ಬಿಗ್ ಜಡಿದು, ಮುಳ್ಳು ಕಂಟಿ ಹಚ್ಚಿ.. ಪಂಚಾಯತಿ ಸಿಬ್ಬಂದಿ ಗೆ ಹೊರ ಹಾಕಿ ಪ್ರತಿಭಟನೆ ನಡೆಸುತ್ತಿದ್ದಾರೆ. ಅಗರಖೇಡ ಗ್ರಾಮದ ವಾರ್ಡ್ ನಂಬರ್ 1 ರಲ್ಲಿ ರಸ್ತೆ ಸುಧಾರಣೆ ಇಲ್ಲದೆ ಜನರು ನಡೆದಾಡುವಾದಕ್ಕೂ ತುಂಬಾ ತೊಂದರೆ ಯಾಗುತ್ತಿದೆ. ಹಾಗು ಯಾವದೇ ವಾಹನಗಳು ಆಸ್ಪತ್ರೆಗೆ ರೋಗಿಗಳನ್ನು ತಗೆದು ಕೊಂಡು ಹೋಗಲು ಆಗುತ್ತಿಲ್ಲ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಸರಿಯಾಗಿ ಇಲ್ಲ, ಹೆಣ್ಣು ಮಕ್ಕಳು ಬಹಿರ್ದೆಸೆಗೆ ಹೋಗಲು ತುಂಬಾ ತೊಂದರೆ ಇದೆ ಎಂದು ಗ್ರಾಮಸ್ಥರು ಎಷ್ಟೋ ಸಲ ಮೌಖಿಕ ವಾಗಿ ತಮ್ಮ ಅಳಲನ್ನು ತೋಡಿಕೊಂಡರು ಗ್ರಾಮ ಪಂಚಾಯತಿ ಸದಸ್ಯರೂ, ಪಿ .ಡಿ.ಓ, ಅವರೂ ಸಮಸ್ಯೆಯನ್ನು ಗಣನೆಗೆ ತಗೆದುಕೊಂಡಿರುವುದಿಲ್ಲ. ಆದ ಕಾರಣ ರೊಚ್ಚಿಗೆದ್ದ ಗ್ರಾಮಸ್ಥರು ಇಂದು ಪಂಚಾಯತಿಗೆ ಬೀಗ ಜಡಿದು ರಸ್ತೆ ಸಂಚಾರ ಬಂದು ಮಾಡಿ ಪ್ರತಿಭಟನೆ ನಡೆಸುತ್ತಿದ್ದಾರೆ.

ಈ ಸಂದರ್ಭದಲ್ಲಿ ಬಾಬುಗೌಡ ಪಾಟೀಲ್, ಮೌಲಾ ಬೀಜಲಿ, ಪ್ರಭುಗೌಡ ಪಾಟೀಲ್, ತುಕಾರಾಂ ಬೋಸಲೇ, ವಿನಾಯಕ್ ಪಾಟೀಲ್, ತಿಪ್ಪಣ್ಣ ಕೌಲಗಿ, ಯಲ್ಲಾಲಿಂಗ ಕೌಲಗಿ, ಸಮೀರ್ ಕೋ ರಬು, ಶ್ರೀಶೈಲ ಪಾರೇಕಾರ್, ಚಂದು ಪಾರೆಕಾರ್, ಇಮಾಮಸಾಬ ಮುಲ್ಲಾ, ಅರುಗೌಡ ಪಾಟೀಲ್, ಪ್ರಕಾಶ್ ಪಾಟೀಲ್, ಕಾಂತು ಕೋಟಿ,

ಪ್ರಕಾಶ್ ಪಾಟೀಲ್, ಇಮಾಮಸಾಬ ಕೊರಬು, ಆರಿಫ್ ಆಗರ ಖೇಡ, ಆರಿಫ್ ಮುಲ್ಲಾ, ಹಾಗು ಗ್ರಾಮದ ಹಿರಿಯರು, ಮುಖಂಡರು, ಯುವಕರು, ಗ್ರಾಮಸ್ಥರು ಪಾಲ್ಗೊಂಡಿದ್ದಾರೆ.

# ವಿದ್ಯಾರ್ಥಿಗಳಿಗೆ ಓದುವುದೇ ದುಡಿಮೆ: ಪ್ರೊ. ಶಾಂತಾದೇವಿ ಟಿ.



**ವಿಜಯಪುರ :** ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳು ವಿದ್ಯಾರ್ಥಿ ಜೀವನದ ಅವಿಭಾಜ್ಯ ಅಂಗಗಳು ಎಂದು ಕರ್ನಾಟಕ ರಾಜ್ಯ ಅಕ್ಕ ಮಹಾದೇವಿ ಮಹಿಳಾ ವಿವಿ ಪ್ರಭಾರ ಕುಲಪತಿ ಪ್ರೊ.ಶಾಂತಾದೇವಿ ಟಿ ಹೇಳಿದರು.

ನಗರದ ಬಿಎಲ್‌ಡಿಇ ಸಂಸ್ಥೆಯ ಎಸ್‌ಬಿ ಕಲಾ ಮತ್ತು ಕೆಸಿಪಿ ವಿಜ್ಞಾನ ಮಹಾವಿದ್ಯಾಲಯದಲ್ಲಿ ನಡೆದ 2024-25 ನೇ ಸಾಲಿನ ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳ ಸಮಾರೋಪ ಸಮಾರಂಭ ಹಾಗೂ ದತ್ತಿ ಬಹುಮಾನ ವಿತರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಸಾಧಕರಿಗೆ ನಾವು ನೀಡುವ ಪ್ರೋತ್ಸಾಹವೇ ಉನ್ನತ ಸಾಧನೆ ಮಾಡಲು ಪ್ರೇರೇಪಣೆ ಹಾಗೂ ಸ್ಫೂರ್ತಿಯಾಗುತ್ತದೆ. ಒಂದು ಪುಸ್ತಕ, ಪೆನ್ನು, ಒಂದು ಮಗು, ಒಬ್ಬ ಶಿಕ್ಷಕ ಇಡೀ ಜಗತ್ತನೆ ಬದಲಾಯಿಸಬಹುದಾದ ಶಕ್ತಿ ಹೊಂದಿದ್ದಾರೆ. ಜೀವನದ ಯಶಸ್ಸಿಗೆ ವಿದ್ಯೆ ಪಡೆಯುವುದು ಎಷ್ಟು ಅವಶ್ಯವೋ ನಿತ್ಯ ಜೀವನದ ಸರ್ವ ವಿದ್ಯಮಾನಗಳನ್ನು ಅರ್ಥಮಾಡಿಕೊಳ್ಳುವುದು ಕೂಡಾ ಅಷ್ಟೇ ಪ್ರಮುಖವಾಗಿದ್ದು, ಶಿಕ್ಷಣದೊಂದಿಗೆ ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳಿಗೆ ಒತ್ತು ನೀಡಬೇಕು ಎಂದರು.

ದುಡಿಮೆ ಬದುಕು ಬದಲಾಯಿಸುತ್ತದೆ. ವಿದ್ಯಾರ್ಥಿಗಳಿಗೆ ಓದುವುದೇ ದುಡಿಮೆ ಎಂದು ಭಾವಿಸಬೇಕು. ಶ್ರಮ ಹಾಕಿ ತಾಳ್ಮೆ, ಸಹನೆ ಹಾಗೂ ನಿರಂತರವಾದ ಕಾಯಕದಿಂದ ಜೀವನದಲ್ಲಿ ಬರುವ ಸಮಸ್ಯೆಗಳನ್ನು ಎದುರಿಸಿ ಬದುಕು ಹಸನಾಗಿಸಿಕೊಳ್ಳಬೇಕು. ಶಿವಶರಣೆ ಅಕ್ಕ ಮಹಾದೇವಿ ಅವರು ಹೇಳಿರುವಂತೆ ಬೆಟ್ಟದ ಮೇಲೆ ಮನೆಯ ಮಾಡಿ ಮೃಗಗಳಿಗೆ ಅಂಜಿದರೆಂತು ಎಂಬಂತೆ ಅಡೆತಡೆಗಳನ್ನು ಧೈರ್ಯದಿಂದ ಎದುರಿಸಬೇಕು. ಸವಾಲುಗಳಿಗೆ ಹೆದರದೆ, ವಿದ್ಯಾರ್ಥಿಗಳು ತಮ್ಮ ಭವಿಷ್ಯ ರೂಪಿಸಿಕೊಳ್ಳಬೇಕು ಎಂದು ಹೇಳಿದರು.

ವಿದ್ಯಾರ್ಥಿಗಳು ಎಲ್ಲರೊಂದಿಗೆ ಬೆರೆತು, ಅವರಲ್ಲಿರುವ ಶಿಕ್ಷಣವನ್ನು ಪಡೆದುಕೊಂಡು ಉನ್ನತ ಸಾಧನೆ ಮಾಡಬಹುದು. ವಿದ್ಯಾರ್ಥಿ-ವಿದ್ಯಾರ್ಥಿನಿಯರು ತಮ್ಮ ಆರೋಗ್ಯದ ಕಡೆಗೂ ಗಮನ ಕೊಡಬೇಕು. ಇತ್ತೀಚಿನ ದಿನಗಳಲ್ಲಿ ಯುವ ಸಮುದಾಯವೇ ಹೃದಯಾಘಾತಕ್ಕೆ ಒಳಗಾಗುತ್ತಿರುವುದು ಅತ್ಯಂತಕ ಕಳವಳಕಾರಿ ಸಂಗತಿಯಾಗಿದ್ದು ಯುವ ಸಮುದಾಯ ಜೀವನದಲ್ಲಿ ದುಶ್ಚಟಗಳು ಸುಳಿಯದಂತೆ ಜಾಗರುಕತೆ ವಹಿಸಿಬೇಕು ಎಂದರು.

ಜ್ಞಾನ ಎನ್ನುವುದು ಸಮುದ್ರ ಇದ್ದಂತೆ, ಪದವಿ ಪಡೆದರೆ ಸಮುದ್ರದ ಒಂದು ಹನಿ ನೀರು ಕುಡಿದಂತೆ, ನಿರಂತರ ಜ್ಞಾನ ನಮ್ಮನ್ನು ಅತೀ ಹೆಚ್ಚು ಪಕ್ವಗೊಳಿಸುತ್ತದೆ. ಸಮಾಜಿಕ ಜಾಲತಾಣಗಳು ಅತ್ಯುಪಯುಕ್ತವಾಗಿವೆ ಆದರೆ ವಿದ್ಯಾರ್ಥಿಗಳು ಯಾವುದನ್ನು ಬಳಸಬೇಕು ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕು. ಕಲಿಯುವುದನ್ನು ನಾವು ಯಾವುತ್ತಿಗೂ ನಿಲ್ಲಿಸಬಾರದು. ಪ್ರತಿದಿನ-ಪ್ರತಿಕ್ಷಣ ಕಲಿಯುವುದಕ್ಕೆ ಪಕೃತಿ ನಮಗೆ ಅನೇಕ ಅವಕಾಶ ನೀಡುತ್ತದೆ. ಅವುಗಳನ್ನು ಸದ್ಭಳಕೆ ಮಾಡಿಕೊಳ್ಳಬೇಕು. ಹಾಗಾಗಿ ವಿದ್ಯಾರ್ಥಿಗಳು ಆತ್ಮವಿಶ್ವಾಸ ಹಾಗೂ ಶ್ರದ್ಧೆಯಿಂದ ಅಧ್ಯಯನ ಮಾಡಿದಲ್ಲಿ ತಮ್ಮ ಬದುಕು ಸುಂದರವಾಗಿಸಿಕೊಳ್ಳಬಹುದು ಎಂದರು

ಮಹಾವಿದ್ಯಾಲಯದ ಪ್ರಾಚಾರ್ಯೆ ಡಾ.ರಾಬಿಯಾ ಮಿರ್ಧೆ ಮಾತನಾಡಿ, ವಿದ್ಯಾರ್ಥಿಗಳು ತಮ್ಮನ್ನು ತಾವು ಅರ್ಥಮಾಡಿಕೊಳ್ಳಬೇಕಾದರೆ ನಮ್ಮ ಬಳಿ ಎಷ್ಟು ಜ್ಞಾನ ಇದೆ ಎನ್ನುವುದು ಅತೀ ಮುಖ್ಯ. ನಾವು ಸಾಧನೆ ಮಾಡಲು ಕಠಿಣ ಪರಿಶ್ರಮ ಹಾಕಬೇಕು. ಅದಕ್ಕೆ ಶಿಸ್ತು, ಸಂಯಮ ಬಹಳ ಮುಖ್ಯವಾಗುತ್ತದೆ. ಎಲ್ಲಕ್ಕಿಂತಲೂ ನಮ್ಮ ಮೇಲೆ ನಮಗೆ ನಂಬಿಕೆ ಇರಬೇಕು. ಸಾಧಿಸುವ ಛಲ ಇದ್ದಲ್ಲಿ ಯಶಸ್ಸು ನಮ್ಮ ಸಮೀಪದಲ್ಲಿಯೇ ಇರುತ್ತದೆ. ಜೀವನದಲ್ಲಿ ಏರಿಳಿತಗಳು ಸಹಜ ನಾವು ಯಾವುದೇ ಕಠಿಣ ಸಂದರ್ಭ ಎದುರಾದರೂ ನಮ್ಮಲ್ಲಿನ ಆತ್ಮವಿಶ್ವಾಸ ಕುಸಿಯದಂತೆ ನೋಡೊಕೊಳ್ಳಬೇಕು ಎಂದರು.

ವಿದ್ಯಾರ್ಥಿಗಳಿಗೆ ಸಾವಿರ ಸಮಸ್ಯೆಗಳಿವೆ ಆದರೂ ಅವುಗಳನ್ನು ಮೆಟ್ಟಿ ನಿಂತು ಸಾಧಿಸಿ ತೊರಿಸಿರುವುದು ನಮ್ಮ ಸಂಸ್ಥೆಗೆ ಹೆಮ್ಮೆಯ ವಿಷಯ. ನಮ್ಮ ಮಹಾವಿದ್ಯಾಲಯ ವಿದ್ಯಾರ್ಥಿಗಳಿಗೆ ಎಲ್ಲ ರೀತಿಯಲ್ಲೂ ಸಹಕಾರ ನೀಡಲಿದೆ. ಸೌಲಭ್ಯಗಳನ್ನು ಬಳಸಿಕೊಂಡು ಇನ್ನಷ್ಟು ಸಾಧನೆ ಮಾಡಬೇಕು ಎಂದರು.

ಕಾರ್ಯಕ್ರಮದಲ್ಲಿ ಶೈಕ್ಷಣಿಕ ಹಾಗೂ ಕ್ರೀಡಾ ಸಾಧಕ ವಿದ್ಯಾರ್ಥಿಗಳಿಗೆ ಹಾಗೂ ವಿವಿಧ ಪ್ರಶಸ್ತಿ ಪುರಸ್ಕೃತ ಪ್ರಾಧ್ಯಾಪಕರನ್ನು ಸನ್ಮಾನಿಸಿ ಬಹುಮಾನ ವಿತರಣೆ ಮಾಡಲಾಯಿತು.

ಈ ವೇಳೆಯಲ್ಲಿ ಡಾ.ಶ್ರೀನಿವಾಸ ದೊಡ್ಡಮನಿ ಮಹಾವಿದ್ಯಾಲಯದ ವಾರ್ಷಿಕ ಕ್ರೀಡಾ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಮತ್ತು ಡಾ.ಸ್ವಾತಿ ಪಾಟೀಲ ಶೈಕ್ಷಣಿಕ ಪ್ರಶಸ್ತಿಗಳನ್ನು ವರದಿಯನ್ನು ವಾಚನ ಮಾಡಿದರು.

ಈ ಸಂದರ್ಭದಲ್ಲಿ ಉಪಪ್ರಾಚಾರ್ಯ ಡಾ.ಅನಿಲಭೀ.ನಾಯಕ್, ಐಕ್ಯೂಎಸಿ ಕೋ-ಆರ್ಡಿನೇಟರ್ ಡಾ.ಪಿ.ಎಸ್.ಪಾಟೀಲ, ದೈಹಿಕ ನಿರ್ದೇಶಕ ಎಸ್.ಕೆ.ಪಾಟೀಲ, ಸಾಂಸ್ಕೃತಿಕ ವಿಭಾಗದ ಕಾರ್ಯಾಧ್ಯಕ್ಷ ಡಾ.ಶ್ರೀನಿವಾಸ ದೊಡಮನಿ, ನ್ಯಾಕ್ ಸಂಯೋಜಕ ಡಾ.ಮಹೇಶ್ ಕುಮಾರ ಕೆ, ಪ್ರೊ.ಪವನ್ ಮಹೀಂದ್ರಕರ್, ಪ್ರೋ.ಎಸ್.ಡಿ.ಪಾಟೀಲ, ವಿದ್ಯಾರ್ಥಿ ಪ್ರತಿನಿಧಿಗಳಾದ ಸೈಯ್ಯದ ಅರ್ಬಾಜ್, ಪಾಯಲ್ ಚವ್ಹಾಣ, ಮಹಾವಿದ್ಯಾಲಯದ ಎಲ್ಲ ವಿಭಾಗಗಳ ಮುಖ್ಯಸ್ಥರು, ಬೋಧಕರು, ಬೋಧಕೇತರ ಸಿಬ್ಬಂದಿ ಮತ್ತಿತರರು ಭಾಗವಹಿಸಿದ್ದರು. ಪ್ರೊ.ಶ್ವೇತಾ ಸವನೂರ ಕಾರ್ಯಕ್ರಮ ನಿರೂಪಿಸಿದರು.

# ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರಿಂದ ಕುಂದು-ಕೊರತೆಗಳ ಸಭೆ



**ವಿಜಯಪುರ :** ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಪೊಲೀಸ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವಿಜಯಪುರ ಹಾಗೂ ಕರ್ನಾಟಕ ರಾಜ್ಯ ಮಹಿಳಾ ಆಯೋಗ ಬೆಂಗಳೂರು ಇವರ ಸಹಯೋಗದಲ್ಲಿ ವಿಧವೆಯರ ಕುಂದು ಕೊರತೆ ಸಭೆಯನ್ನು ನಗರದ ಕಂದಗಲ್ ಶ್ರೀ ಹಣಮಂತರಾಯ ರಂಗಮಂದಿರದಲ್ಲಿ ಗುರುವಾರ ಆಯೋಜಿಸಿಲಾಗಿತ್ತು.

ಸಭೆಯ ಅಧ್ಯಕ್ಷತೆ ವಹಿಸಿದ್ದ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮಿ ಚೌಧರಿ ಅವರು ಮಹಿಳೆಯರ ಸಮಸ್ಯೆಯನ್ನು ಅತ್ಯಂತ ಶಾಂತಚಿತ್ತದಿಂದ ಆಲಿಸಿ, ಅವರ ಸಮಸ್ಯೆಗಳಿಗೆ ಪರಿಹಾರಕ್ಕೆ ಸಂಬಂಧಪಟ್ಟವರಿಗೆ ಸೂಚಿಸಿದರು. ಈ ಕುಂದು ಕೊರತೆ ಸಭೆಯಲ್ಲಿ ವಿಜಯಪುರ ಸೇರಿದಂತೆ ವಿವಿಧ ಜಿಲ್ಲೆಗಳಿಂದ ಮಹಿಳೆಯರ ಸಮಸ್ಯೆಗಳನ್ನು ಆಲಿಸಲಾಯಿತು.

ಸಮಸ್ಯೆಗಳನ್ನು ಆಲಿಸಿದ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮಿ ಚೌಧರಿ ಮಹಿಳೆಯರ ಸಮಸ್ಯೆಗಳಿಗೆ ಪರಿಹಾರ ದೊರಕಿಸಿ ಕೊಡುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು. ಸಂಬಂಧಿಸಿದ ಸರ್ಕಾರಿ ಇಲಾಖೆಗಳಿಗೆ ತಮ್ಮ ಸಮಸ್ಯೆಗಳನ್ನು ಕೊಂಡೊಯ್ದು ತಮ್ಮ ಸಮಸ್ಯೆಗಳಿಗೆ ಪರಿಹರಿಸಲಾಗುವುದು ಎಂದು ಅವರು ಹೇಳಿದರು.

ವಿಜಯಪುರದ ಅನ್ನಪೂರ್ಣ ನಾಗನೂರು ಎಂಬುವವರು ಬದುಕಿಗೆ ಯಾವುದೇ ಸೂರಿಲ್ಲದೇ ತುಂಬ ತೊಂದರೆಯಾಗುತ್ತಿದ್ದು, ಸರ್ಕಾರಿ ಯೋಜನೆಯಡಿ ಯಾವುದಾದರೊಂದು ಮನೆ ಹಾಗೂ ಉದ್ಯೋಗ ಒದಗಿಸುವಂತೆ ಮನವಿ ಮಾಡಿಕೊಂಡ ಹಿನ್ನಲೆಯಲ್ಲಿ ಆಶ್ರಯ ಯೋಜನೆ ಮನೆ ಹಾಗೂ ಉದ್ಯೋಗ ದೊರಕಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಅವರು ಸೂಚನೆ ನೀಡಿದರು.

ರಬಕವಿ ಬನ್ನಟ್ಟಿಯಿಂದ ಬಂದಿದ್ದ 20 ವರ್ಷದ ರೇಖಾ ತುಂಗಳ ಎಂಬುವವರು ತನಗೆ ಎರಡು ಮಕ್ಕಳ ಹಾಗೂ ವೃದ್ಧ ತಂದೆ ತಾಯಿ ಇದ್ದು, ಜೀವನ ನಿರ್ವಹಣೆಗೆ ಆಧಾರ ಕಲ್ಪಿಸಿಕೊಡುವಂತೆ ಕೋರಿದ ಮನವಿಗೆ ಸ್ಪಂದಿಸಿದ ಅಧ್ಯಕ್ಷರು ಪೋಷಕತ್ವ ಯೋಜನೆಯ ಸದುಪಯೋಗ ಪಡೆದುಕೊಳ್ಳುವಂತೆಯೂ ಉದ್ಯೋಗ ದೊರಕಿಸಿ ಕೊಡುವುದಾಗಿ ಭರವಸೆ ನೀಡಿದರು. ವಿಜಯಪುರದ ಸವಿತಾ ಜಮಾದಾರ ಎಂಬುವವರು ಶ್ರವಣ ದೋಷವಿರುವ ತಮ್ಮ ಮಗನ ಚಿಕಿತ್ಸೆಗೆ ಸಹಾಯ, ಚಡಚಣದ ಬಾಕಿಯೋರ್ವಳು ಮುಂದಿನ ವಿದ್ಯಾಭ್ಯಾಸಕ್ಕೆ ಅಗತ್ಯ ದಾಖಲೆಗಳು ಹಾಗೂ ತನ್ನ ಸಹೋದರಿಗೆ ಹೃದ್ರೋಗದ ಚಿಕಿತ್ಸೆಗೆ ಸಹಾಯ, ಕಲ್ಬುರ್ಗಿಯ ಜಯಶ್ರೀ ಕಲ್ಲೂರ ಅವರ ಮಕ್ಕಳ ಶಿಕ್ಷಣ ಹಾಗೂ ಉದ್ಯೋಗಕ್ಕೆ ಸಹಾಯ, ಬಿಎಡ್, ಡಿಎಡ್ ಶಿಕ್ಷಣ ಹೊಂದಿರುವ ಸಿಂದಗಿಯ ಗುರುಸಿದ್ದಮ್ಮ ಹೊಸಮನಿಯವರು ಮನವಿ ಸಲ್ಲಿಸಿ, ಪತಿ ನಿಧನವಾಗಿದ್ದು, ಮೂರು ಮಕ್ಕಳಿಗೆ ಕಷ್ಟಸಾಧ್ಯವಾಗುತ್ತಿದೆ. ಕುಟುಂಬ ನಿರ್ವಹಣೆಗೆ ಉದ್ಯೋಗ ದೊರಕಿಸಬೇಕು. ಅದರಂತೆ ಹಿಟ್ನಳ್ಳಿಯ ವಿಕಲಚೇತನೆ ಚನ್ನಮ್ಮ ಮೇತ್ರಿ ಎಂಬುವವರು ತಾನು ಬಿಎಡ್, ಎಂ ಎಡ್ ಓದಿದ್ದು, ನನಗೆ ಉದ್ಯೋಗ ದೊರಕಿಸುವಂತೆ ಮನವಿ ಸಲ್ಲಿಸಿದ್ದು, ಸಲ್ಲಿಕೆಯಾದ ಎಲ್ಲ ಬೇಡಿಕೆಗಳಿಗೆ ಸ್ಪಂದಿಸಿ, ಪರಿಹಾರ ಒದಗಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸಲಾಗುವುದು ಎಂದು ಅವರು ಹೇಳಿದರು.

ಖಾಸಗಿ ಶಿಕ್ಷಣ ಸಂಸ್ಥೆಯಲ್ಲಿ ಶಿಕ್ಷಕಿಯಾಗಿ ಕಾರ್ಯನಿರ್ವಹಿತಿದ್ದ ಮಹಿಳೆಯೋರ್ವಳು, ತಮ್ಮ ದೂರು ಸಲ್ಲಿಸಿ, ಪತಿಯ ನಿಧನದ ನಂತರ ಜಮೀನು ಮಾರಿದ್ದ ಮಾಲೀಕನು ಇದೀಗ ಜಮೀನಿನಲ್ಲಿ ಉಳುಮೆ ಮಾಡಲು ತಡೆಯೊಡ್ಡುತ್ತಿದ್ದು, ನನಗೆ ಸಹಾಯ ಒದಗಿಸುವಂತೆ ಕೋರಿ ಬಂದ ಮನವಿ ನಾಗಲಕ್ಷ್ಮಿಯವರು ಸ್ಥಳದಲ್ಲಿದ್ದ ಸಂಬಂದಿಸಿದ್ದ ಅಧಿಕಾರಿಗಳಿಗೆ ಸಮಸ್ಯೆ ಪರಿಹಾರಕ್ಕೆ ಕ್ರಮ ವಹಿಸುವಂತೆ ಅವರು ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರಾದ ಕೆ.ಕೆ.ಚವ್ಹಾಣ, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರಾದ ಪುಂಡಲಿಕ ಮಾನವರ, ಜಿಲ್ಲಾ ಶಸ್ತ್ರಚಿಕಿತ್ಸಕರಾದ ಶಿವಾನಂದ ಮಾಸ್ತಿಹೊಳಿ, ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿಗಳಾದ ಸಿ.ಬಿ.ಕುಂಬಾರ, ಜಿಲ್ಲಾ ಪಂಚಾಯತಿಯ ಯೋಜನಾ ನಿರ್ದೇಶರಾದ ರಾಠೋಡ, ವಿವಿಧ ಜಿಲ್ಲಾಮಟ್ಟದ ಅಧಿಕಾರಿಗಳು, ಪೊಲೀಸ್ ಇಲಾಖೆಯ ಅಧಿಕಾರಿಗಳು ಹಾಗೂ ಇತರರು ಉಪಸ್ಥಿತರಿದ್ದರು.

# ತ್ರಿಲೋಕ ಸಂಚಾರಿಯಾದ ನಾರದರು, ಪತ್ರಿಕೋದ್ಯಮದ ಪ್ರೇರಣೆ: ಅರುಣಕುಮಾರ

**ಬಾಗಲಕೋಟೆ :** ಪತ್ರಕರ್ತನಲ್ಲಿ ಉತ್ತಮ ಚಾರಿತ್ರ್ಯ, ಶುದ್ಧ ಭಾಷಾ ಶೈಲಿ, ಸೊಗಸಾದ ಬರವಣಿಗೆ ಹಾಗೂ ಸಂವಹನ ಕೌಶಲ್ಯಗಳು ಅತೀ ಅವಶ್ಯಕ ಎಂದು ಆರ್‌ಎಸ್‌ಎಸ್ನ ಉತ್ತರ ಹಾಗೂ ದಕ್ಷಿಣ ಪ್ರಾಂತ ಪ್ರಚಾರ ಪ್ರಮುಖರಾದಅರುಣಕುಮಾರಹೇಳಿದರು.

ನಗರದ ಆರ್‌ಎಸ್‌ಎಸ್ .ಸಂಘಮಿತ್ರ ಕಚೇರಿಯಲ್ಲಿ ದೇವಋಷಿ ನಾರದ ಜಯಂತಿ ಪ್ರಯುಕ್ತ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮುಖ್ಯ ವಕ್ತಾರರಾಗಿ ಅವರು ಭಾಗವಹಿಸಿ ಮಾತನಾಡಿದರು.

ಪತ್ರಿಕೋದ್ಯಮವನ್ನು ಶುದ್ಧವಾಗಿಡುವುದು ಪತ್ರಕರ್ತರ ಜವಾಬ್ದಾರಿ. ಇದು ಸರಳ ಉದ್ಯೋಗವಲ್ಲ, ಬಹಳ ಕಠಿಣ ವೃತ್ತಿ. ಪತ್ರಿಕೋದ್ಯಮದ ಮೂಲ ಪುರುಷ ನಾರದ ಮುನಿಗಳು ತ್ರಿಲೋಕ ಸಂಚಾರಿ. ಅವರು ದೇವತೆಗಳಿಗೂ, ಸಂಭವಿಸುವ ಘಟನೆಗಳನ್ನು ವಿವರಿಸುತ್ತಿದ್ದರು. ಜೊತೆಗೆ ಸಂಧಾನಕಾರರಾಗಿ, ರಾಯಭಾರಿಯೂ ಆಗಿದ್ದರು. ವ್ಯಾಸ ಮಹರ್ಷಿಗಳಿಗೆ ವೇದ ಬರೆಯಲು ಸಹಾಯ ಮಾಡಿದ ಮಹಾನ್ ಋಷಿ" ಎಂದು ಅವರು ತಿಳಿಸಿದರು.



ಚಿತ್ರರಂಗದವರು ನಾರದ ಮುನಿಯ ವ್ಯಕ್ತಿತ್ವವನ್ನು ಅವಮಾನಿಸಿದ್ದಾರೆ. ಅವರ ನಿಜ ವ್ಯಕ್ತಿತ್ವ ಹಾಗೂ ಗುಣಗಳನ್ನು ಸಮಾಜಕ್ಕೆ ತಿಳಿಸುವ ಕೆಲಸ ನಡೆಯಬೇಕು. ನಾರದರು ತಮ್ಮ ಕಾರ್ಯದಿಂದ ಸಮಾಜಕ್ಕೆ ಶ್ರೇಷ್ಠ ಆದರ್ಶ ನೀಡಿದ್ದರು. ಅವರಂತವರಿಂದ ಪತ್ರಿಕೋದ್ಯಮ ಪ್ರೇರಣೆಯಾಗಿದೆ ಎಂದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಜಿಲ್ಲಾ ಕಾನಿಪ ಅಧ್ಯಕ್ಷ ಆನಂದ ಧಲಬಂಜನ ಅವರು, "ನಾರದರು ದೇವತೆಗಳ ಸಂಪರ್ಕ ಸೇತುವೆಯಾಗಿ ಕಾರ್ಯನಿರ್ವಹಿಸುತ್ತಿದ್ದರು. ಅವರಿಂದ ದೇವತೆಗಳನಡುವೆಮಾಹಿತಿಯವಿನಿಮಯ ನಡೆಯುತ್ತಿತ್ತು. ಅವರದ್ದೇ ಪತ್ರಿಕೋದ್ಯಮಕ್ಕೆ ಮೂಲವಿದ್ಯೆ. ಪುರಾತನ ಕಾಲದಲ್ಲಿ ರಾಜಮಾರುಕಟ್ಟೆಗಳಲ್ಲಿಧೂತರುಪತ್ರಕರ್ತರ ಶಕ್ತಿಯನ್ನು ಹೊತ್ತವರಾಗಿದ್ದರು. ಆದರೆ ಇಂದಿನ ದಿನಗಳಲ್ಲಿ ಪತ್ರಿಕೋದ್ಯಮದಲ್ಲಿ ಬಹುಪಾಲು ಬದಲಾವಣೆಗಳಿವೆ. ನವಯುಗದ ಪತ್ರಕರ್ತರು ಸಂವಹನ ತಂತ್ರಜ್ಞಾನವನ್ನು ಸಂಪೂರ್ಣವಾಗಿ ಬಳಸಿಕೊಳ್ಳಬೇಕು. ಹಾಗಾದರೆ ಮಾತ್ರ ಉತ್ತಮ ಪತ್ರಕರ್ತರಾಗಲು ಸಾಧ್ಯ" ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾ ಸಂಘ ಚಾಲಕ ಚಂದ್ರಶೇಖರ ದೊಡಮನಿ ವಹಿಸಿದ್ದರು.

ಮಾಜಿ ಶಾಸಕ ವೀರಣ್ಣ ಚರಂತಿಮಠ, ಬಿಜೆಪಿ ಜಿಲ್ಲಾ ಅಧ್ಯಕ್ಷ ಶಾಂತಗೌಡ ಪಾಟೀಲ, ಗುಂಡೂರಾವ ಶಿಂಧೆ, ಜಯಂತ ಕುರಂದವಾಡ,ಸತ್ಯನಾರಾಯಣಹೇಮಾದ್ರಿ, ಸುರೇಶ ಮಜ್ಜಗಿ, ತಿಮ್ಮಣ್ಣ ಭಜಂತ್ರಿ, ಚಂದ್ರು ಹೂಗಾರ, ಪತ್ರಕರ್ತರು, ಪತ್ರಿಕೋದ್ಯಮ ವಿದ್ಯಾರ್ಥಿಗಳು ಹಾಗೂ ಇತರ ಗಣ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಸಿಎಂ ಅಲ್ಲ, ಪತ್ರ ರಾಮಯ್ಯ: ಶಾಂತಗೌಡ ಪಾಟೀಲರಿಂದ ತೀವ್ರ ವಾಗ್ದಾಳಿ



**ಬಾಗಲಕೋಟೆ :** ಜಿಲ್ಲಾ ಬಿಜೆಪಿ ಅಧ್ಯಕ್ಷ ಶಾಂತಗೌಡ ಪಾಟೀಲ ಅವರು ಮುಖ್ಯಮಂತ್ರಿ ಸಿದ್ಧರಾಮಯ್ಯ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದು, "ಇವರು ಸಿಎಂ ಅಲ್ಲ, ಪತ್ರ ರಾಮಯ್ಯ" ಎಂಬ ಲೇವಡಿಯ ಮಾತುಗಳಿಂದ ಕಾಂಗ್ರೆಸ್ ಸರ್ಕಾರದ ಸಾಧನಾ ಸಮಾವೇಶವನ್ನೇ ಪ್ರಶ್ನಿಸಿದ್ದಾರೆ.

ನವನಗರದ ಪಕ್ಷದ ಕಾರ್ಯಾಲಯದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, "ಕಾಂಗ್ರೆಸ್ ಸರ್ಕಾರದ ಸಾಧನೆ ಸಂಪೂರ್ಣ ಶೂನ್ಯ. ಜನತೆಗೆ ನಿಖರವಾದ ಅಭಿವೃದ್ಧಿ ನೀಡುವ ಬದಲು, ಕೇವಲ ಸಮಾವೇಶಗಳ ಮೂಲಕ ಮತದಾರರನ್ನು ಮೋಸಗೊಳಿಸುತ್ತಿದ್ದಾರೆ," ಎಂದು ವಾಗ್ದಾಳಿ ನಡೆಸಿದರು.

ಬಾದಾಮಿಕ್ಷೇತ್ರದವಿಚಾರವಾಗಿಮಾತನಾಡಿದಅವರು, "ಸಿದ್ದರಾಮಯ್ಯನವರಿಗೆ ರಾಜಕೀಯ ಪುನರ್ಜನ್ಮ ನೀಡಿದ ಕ್ಷೇತ್ರವೇ ಬಾದಾಮಿ. ಆದರೆ ಇವರೆಲ್ಲೂ ಕ್ಷೇತ್ರದ ಅಭಿವೃದ್ಧಿಗೆ ಯಾವುದೇ ಗಂಭೀರತೆಯಿಂದ ಕೆಲಸ ಮಾಡಿಲ್ಲ. ವಿರೋಧ ಪಕ್ಷದಲ್ಲಿದ್ದಾಗ ಸಿಎಂ ಬೊಮ್ಮಾಯಿ ಅವರಿಗೆ ಬಾದಾಮಿಗೆ ಅನುದಾನ ನೀಡುವಂತೆ ಪತ್ರ ಬರೆದವರೇ, ಇಂದು ಅವರು ಸಿಎಂ ಆಗಿದ್ದರೂ ಬಾದಾಮಿ ಜಿಲ್ಲೆಗೆ ಯಾವುದೇ ಅನುದಾನ ತಂದಿಲ್ಲ. ಮರಳಿ ಈಗ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯುತ್ತಿದ್ದಾರೆ. ಇವರು ಸಿಎಂ ಅಲ್ಲ, ಪತ್ರ ರಾಮಯ್ಯ," ಎಂದು ತೀಕ್ಷ್ಣವಾಗಿ ಟೀಕಿಸಿದರು.

ಇದೇ ವೇಳೆ ಅವರು ಸರ್ಕಾರಿ ಕಚೇರಿಗಳ ಪರಿಸ್ಥಿತಿಯ ಮೇಲೂ ಮಾತನಾಡಿದರು. "ಇಂದಿನ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಸರ್ಕಾರಿ ಕಚೇರಿಗಳು ಕಾಂಗ್ರೆಸ್ ಕಚೇರಿಗಳಂತಾಗಿವೆ ಎಂದು ದೂರಿದರು.

ಈ ಸಂದರ್ಭದಲ್ಲಿ ಸಂಸದ ಪಿ.ಸಿ. ಗದ್ದಿಗೌಡರ, ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ, ಜಿಲ್ಲಾ ವಕ್ತಾರ ಸತ್ಯನಾರಾಯಣ ಹೇಮಾದ್ರಿ, ಮಾಧ್ಯಮ ಸಂಚಾಲಕ ಶಿವಾನಂದ ಸುರಪುರ ಇದ್ದರು.

## ವೀರಶೈವ ಕಾಲೇಜಿನ ಆಡಳಿತ ಮಂಡಳಿಯ ಅಧ್ಯಕ್ಷರಾಗಿ ಶಾಂತನಗೌಡ ಮರುನೇಮಕ, ಸ್ನೇಹಿತರಿಂದ ಅಭಿನಂದನೆ

**ಬಳ್ಳಾರಿ :** ಜಿಲ್ಲೆಯ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯಾದ ವೀರಶೈವ ವಿದ್ಯಾವರ್ಧಕ ಸಂಘದ ವೀರಶೈವ ಮಹಾವಿದ್ಯಾಲಯದ ಆಡಳಿತ ಮಂಡಳಿಯ ಅಧ್ಯಕ್ಷರಾಗಿ ಶಾಂತನಗೌಡ ಧಾರವಾಡ ಉಚ್ಚ ನ್ಯಾಯಾಲಯ ಆದೇಶದ ಮೇರೆಗೆ ಮರು ನೇಮಕಗೊಂಡಿದ್ದಾರೆ. ಅವರು ಕಾಲೇಜಿನ ಆಡಳಿತ ಮಂಡಳಿಯ ಕಚೇರಿಯಲ್ಲಿ ಇತ್ತೀಚೆಗೆ ಅಧಿಕಾರವನ್ನು ಸ್ವೀಕರಿಸಿದರು.



ಕಳೆದ ಕೆಲ ದಿನಗಳ ಹಿಂದೆ ವೀರಶೈವ ವಿದ್ಯಾವರ್ಧಕ ಸಂಘವು ಶಾಂತನಗೌಡ ಅವರನ್ನು ವೀರಶೈವ ಮಹಾವಿದ್ಯಾಲಯದ ಆಡಳಿತ ಮಂಡಳಿ ಅಧ್ಯಕ್ಷ ಸ್ಥಾನದಿಂದ ವಜಾಗೊಳಿಸಿ ಆ ಸ್ಥಾನಕ್ಕೆ ಸಾಹುಕಾರ್ ಸತೀಶ್ ಬಾಬು ಅವರನ್ನು ನೇಮಕಗೊಳಿಸಲಾಗಿತ್ತು. ಇದನ್ನು ಪ್ರಶ್ನಿಸಿ ಶಾಂತನಗೌಡ ಧಾರವಾಡ ಉಚ್ಚ ನ್ಯಾಯಾಲಯದಿಂದ ತಡೆಯಾಜ್ಞೆ ಪಡೆದುಕೊಂಡು ಮತ್ತೆ ಆಡಳಿತ ಮಂಡಳಿಯ ಅಧ್ಯಕ್ಷರಾಗಿ ಅಧಿಕಾರವನ್ನು ಸ್ವೀಕರಿಸಿದ್ದಾರೆ. ಈ ಸಂದರ್ಭದಲ್ಲಿ ಅವರ ಸ್ನೇಹಿತರು ಮತ್ತು ಅಭಿಮಾನಿಗಳು ಹಾಗೂ ವಿವಿ ಸಂಘದ ಅಜೀವ ಸದಸ್ಯರುಗಳು ಶಾಂತನಗೌಡ ಅವರನ್ನು ಅಭಿನಂದಿಸಿದ್ದಾರೆ.

## ವಸತಿ ಶಾಲೆಗಳ ಪ್ರವೇಶ; ಶಾಲಾ ಆದ್ಯತೆ ನಮೂದಿಸಲು ವಿದ್ಯಾರ್ಥಿಗಳಿಗೆ ಸೂಚನೆ

**ಕೊಪ್ಪಳ :** ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ನಿರ್ವಹಣೆಯಾಗುತ್ತಿರುವ ಕೊಪ್ಪಳ ಜಿಲ್ಲೆಯಲ್ಲಿನ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ ಹಾಗೂ ಡಾ. ಎ.ಪಿ.ಜೆ.ಅಬ್ದುಲ್ ಕಲಾಂ ವಸತಿ ಶಾಲೆಗಳಲ್ಲಿ 2025-26ನೇ ಸಾಲಿಗಾಗಿ 6ನೇ ತರಗತಿ ಪ್ರವೇಶ ಪರೀಕ್ಷೆ ಬರೆದ ವಿದ್ಯಾರ್ಥಿಗಳುಶಾಲಾಆದ್ಯತೆಯನ್ನುನಮೂದಿಸುವಂತೆಸೂಚಿಸಲಾಗಿದೆ.

ಮೇಲ್ಕಂಡ ವಸತಿ ಶಾಲೆಗಳಲ್ಲಿ 6ನೇ ತರಗತಿಗೆ ಪ್ರವೇಶ ನೀಡಲು ಆನ್‌ಲೈನ್ ಮುಖಾಂತರ ಸೇವಾಸಿಂಧು ಪೋರ್ಟಲ್‌ನಲ್ಲಿ ಅರ್ಜಿ ಆಹ್ವಾನಿಸಲಾಗಿತ್ತು. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿರುವ ವಿದ್ಯಾರ್ಥಿಗಳಿಗೆ ಜಿಲ್ಲೆಯ ವಿವಿಧ ಕೇಂದ್ರಗಳಲ್ಲಿ ಏಪ್ರಿಲ್ 27 ರಂದು ಪ್ರವೇಶ ಪರೀಕ್ಷೆಯನ್ನು ನಡೆಸಲಾಗಿತ್ತು. ಪ್ರವೇಶ ಪರೀಕ್ಷೆ ಬರೆದ ವಿದ್ಯಾರ್ಥಿಗಳಿಗೆ ಮಾತ್ರ ಶಾಲಾ ಆದ್ಯತೆಯನ್ನು (School Priority) ನಮೂದಿಸಲು ಮೇ 17 ರವರೆಗೆ ಅವಕಾಶ ಕಲ್ಪಿಸಲಾಗಿರುತ್ತದೆ. ಆದ್ದರಿಂದ ಪ್ರವೇಶ ಪರೀಕ್ಷೆ ಬರೆದ ವಿದ್ಯಾರ್ಥಿಗಳು ಅಲ್ಪಸಂಖ್ಯಾತರ ನಿರ್ದೇಶನಾಲಯದ ವೆಬ್‌ಸೈಟ್ dom.karnataka.gov.in ಗೆ ಭೇಟಿ ನೀಡಿ ಶಾಲಾ ಆದ್ಯತೆಯನ್ನು ನಮೂದಿಸಲು ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಅಲ್ಪಸಂಖ್ಯಾತರ ಕಛೇರಿ, ತಮ್ಮ ಹತ್ತಿರದ ವಸತಿ ಶಾಲೆ, ಜಿಲ್ಲಾ ಅಲ್ಪಸಂಖ್ಯಾತರ ಮಾಹಿತಿ ಕೇಂದ್ರ, ಕೊಪ್ಪಳ 08539-225070, 8088892549, ತಾಲ್ಲೂಕು ಅಲ್ಪಸಂಖ್ಯಾತರ ಮಾಹಿತಿ ಕೇಂದ್ರ, ಗಂಗಾವತಿ-9972624670, ಕುಷ್ಟಗಿ-8861610578, ಯಲಬುರ್ಗಾ -9620522537 ವಿಳಾಸಗಳಿಗೆ ಸಂಪರ್ಕಿಸಬಹುದು ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅಪ್ರಾಪ್ತ ವಯಸ್ಸಿನ ಮಕ್ಕಳಿಗೆ ವಾಹನ ಚಾಲನೆಗೆ ಅವಕಾಶ ನೀಡದಂತೆ ಮನವಿ

**ಕೊಪ್ಪಳ :** ಮೋಟಾರು ವಾಹನಗಳ ಕಾಯ್ದೆ-1988 ರನ್ವಯಅಪ್ರಾಪ್ತವಯಸ್ಸಿನಮಕ್ಕಳಿಗೆವಾಹನಚಾಲನೆಗೆ ಅವಕಾಶ ನೀಡುವುದು ಶಿಕ್ಷಾರ್ಹ ಅಪರಾಧವಾಗಿದ್ದು, ಪೋಷಕರು ಹಾಗೂ ವಾಹನ ಮಾಲೀಕರು ಅಪ್ರಾಪ್ತ ವಯಸ್ಸಿನ ಮಕ್ಕಳಿಗೆ ವಾಹನ ಚಾಲನೆಗೆ ಅವಕಾಶ ಅಥವಾ ಅನುಮತಿ ನೀಡದಂತೆ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಮನವಿ ಮಾಡಿದ್ದಾರೆ.

ಮೋಟಾರು ವಾಹನಗಳ ಕಾಯ್ದೆ-1988 ರನ್ವಯ ಅಪ್ರಾಪ್ತ ವಯಸ್ಸಿನ ಮಕ್ಕಳು ವಾಹನ ಚಲಾಯಿಸಿದಲ್ಲಿ ಕಲಂ 188(5) ರಡಿ ವಾಹನ ಮಾಲೀಕರಿಗೆ ರೂ.1000/- ದಂಡ ಮತ್ತು 03 ತಿಂಗಳು ಜೈಲು ಶಿಕ್ಷೆ, ಪರವಾನಗಿ ಇಲ್ಲದೇ ವಾಹನ ಚಲಾಯಿಸಿದ್ದಕ್ಕಾಗಿ ಚಲಾಯಿಸಿದ ವ್ಯಕ್ತಿಗೆ ಕಲಂ 181(4) ರಡಿ ರೂ.500/- ದಂಡ ಮತ್ತು 03 ತಿಂಗಳು ಜೈಲು ಶಿಕ್ಷೆ ವಿಧಿಸಬಹುದಾಗಿದೆ. ಒಂದು ವೇಳೆ ಅಪ್ರಾಪ್ತ ವಯಸ್ಸಿನ ಮಕ್ಕಳು ವಾಹನ ಚಲಾಯಿಸಿ ಅಪಘಾತ ಎಸಗಿದಲ್ಲಿ ಈ ಅಪಘಾತದಿಂದಾಗುವ ನಷ್ಟವನ್ನು ವಾಹನ ಮಾಲೀಕರಿಂದ ಭರಿಸಬಹುದಾಗಿದೆ.

2021 ರಲ್ಲಿ ಜಿಲ್ಲೆಯಲ್ಲಿ ದಾಖಲಾದ ಪ್ರಕರಣ ಸಂಖ್ಯೆ: 275/2021(ಎಂ.ವಿ.ಸಿ.)ರಲ್ಲಿ ಯಲಬುರ್ಗಾ ಪ್ರಥಮ ದರ್ಜೆ ಕಾಲೇಜಿನಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದ ರಾಜಶೇಖರ ತಂ. ಅಯ್ಯನಗೌಡ ಪಾಟೀಲ್ ಎಂಬುವವರು ದಿನಾಂಕ: 10.03.2021 ರಂದು ಯಲಬುರ್ಗಾ ಪಟ್ಟಣದ ರಸ್ತೆಯೊಂದರ ಎಡಬದಿಯಲ್ಲಿ ನಿಂತು ಮಾತನಾಡುತ್ತಿರುವಾಗ ಅಪ್ರಾಪ್ತ ವಯಸ್ಸಿನ ಬಾಲಕನೊಬ್ಬ ಅತಿ ವೇಗವಾಗಿ ಹಾಗೂ ಅಲಕ್ಷ್ಯತನದಿಂದ ಪ್ಯಾಸೆಂಜರ್ ಆಟೋವನ್ನು ಚಲಾಯಿಸಿಕೊಂಡು ಬಂದು ಡಿಕ್ಕಿ ಹೊಡೆದ ಪರಿಣಾಮ ವ್ಯಕ್ತಿ ಮೃತಪಟ್ಟಿದ್ದು, ಈ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಗಂಗಾವತಿಯ ಜೆ.ಎಮ್.ಎಫ್.ಸಿ. ನ್ಯಾಯಾಲಯದ ಹಿರಿಯ ಸಿವ್ಹಿಲ್ ನ್ಯಾಯಾಧೀಶರು ಅಪ್ರಾಪ್ತ ವಯಸ್ಸಿನ ಬಾಲಕನಿಗೆ ವಾಹನವನ್ನು ಚಲಾಯಿಸಲು ನೀಡಿದ ಆಟೋ ರಿಕ್ಷಾದ ಮಾಲೀಕರಿಗೆ ರೂ.1,41,61,580/-ಗಳ ಪರಿಹಾರ ಧನವನ್ನು ಮೃತರ ಕುಟುಂಬಕ್ಕೆ ನೀಡುವಂತೆ ಆದೇಶಿಸಿರುತ್ತಾರೆ. ಆದ್ದರಿಂದ ಪೋಷಕರು ಹಾಗೂ ವಾಹನ ಮಾಲೀಕರು ಅಪ್ರಾಪ್ತ ವಯಸ್ಸಿನ ಮಕ್ಕಳಿಗೆ ವಾಹನ ಚಾಲನೆಗೆ ಅವಕಾಶ ಅಥವಾ ಅನುಮತಿ ನೀಡಬಾರದು ಎಂದು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಪ್ರಕಟಣೆ ಮೂಲಕ ಕೋರಿದ್ದಾರೆ.

## ಡಾ. ರಮಾಕಾಂತ ಜೋಶಿ ನಿಧನ

**ಧಾರವಾಡ:** ಇಲ್ಲಿಯ ಮನೋಹರ ಗ್ರಂಥಮಾಲಾ ಧಾರವಾಡದ ಸಂಪಾದಕ, ವ್ಯವಸ್ಥಾಪಕರು, ನಿವೃತ್ತ ಆಂಗ್ಲ ಪ್ರಾಧ್ಯಾಪಕ ಮತ್ತು ಬರಹಗಾರ ಡಾ.ರಮಾಕಾಂತ ಜೋಶಿಯವರು ಇಂದು (17.05.2025, ಶನಿವಾರ) ಮಧ್ಯಾಹ್ನ 03.00 ಗಂಟೆಗೆ ನಿಧನ ಹೊಂದಿದರು. ಅವರಿಗೆ 89 ವರ್ಷ ವಯಸ್ಸಾಗಿತ್ತು.

ಮನೋಹರ ಗ್ರಂಥಮಾಲಾ ಸ್ಥಾಪಕರಾದ ಶ್ರೀ ಜಿ ಬಿ ಜೋಶಿಯವರ ಮಗನಾದ ಡಾ. ರಮಾಕಾಂತ ಜೋಶಿಯವರು ಗುಜರಾತಿನ ಆನಂದ ವಿಶ್ವ ವಿದ್ಯಾಲಯದಿಂದ ಸ್ನಾತಕೋತ್ತರ ಮತ್ತು ಪಿ. ಎಚ್. ಡಿ. ಪದವಿ ಪಡೆದ ರಮಾಕಾಂತ ಜೋಶಿಯವರು ಧಾರವಾಡದ ಕಿಟೆಲ್ ಕಾಲೇಜಿನಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿ ಕೆಲಸ ಮಾಡಿದ್ದಾರೆ ಮತ್ತು ವಿಭಾಗದ ಮುಖ್ಯಸ್ಥರಾಗಿದ್ದರು. ಹಲವಾರು ಗ್ರಂಥಗಳ ಸಂಪಾದನೆ ಮಾಡಿದ್ದರು ಮತ್ತು ಅನುವಾದ ಕಾರ್ಯವನ್ನು ಸಹ ಮಾಡಿದ್ದರು. ದೀನಾನಾಥ ಮಲ್ಹೋತ್ರಾ ಅವರು ಇಂಗ್ಲಿಷಿನಲ್ಲಿ ಬರೆದ BOOK PUBLISHING ಕೃತಿಯನ್ನು ಕನ್ನಡಕ್ಕೆ ಅನುವಾದಿಸಿದ್ದು, ಪುಸ್ತಕ ಪ್ರಕಾಶನ ಪ್ರಪಂಚದಲ್ಲಿ ಅದೊಂದು ಅತ್ಯಂತ ಪ್ರಮುಖ ಕೃತಿ ಎನಿಸಿದೆ. 1993 ಡಿಸೆಂಬರ್ 26 ರಂದು ಜಿ ಬಿ ಜೋಶಿಯವರು ನಿಧನರಾದ ನಂತರ ಮನೋಹರ ಗ್ರಂಥಮಾಲಾದ ಸಂಪೂರ್ಣ ಜವಾಬ್ದಾರಿ ಹೊತ್ತುಕೊಂಡು ಯಶಸ್ವಿಯಾಗಿ ನಡೆಸಿದರು.

ಅನೇಕ ಪ್ರಶಸ್ತಿಗಳಿಗೆ, ಮಾನ ಸನ್ಮಾನಗಳಿಗೆ ಭಾಜನರಾಗಿದ್ದಾರೆ. ದಿಲ್ಲಿಯ ಭಾರತೀಯ ಪ್ರಕಾಶಕರ ಒಕ್ಕೂಟದ 'ವಿಶಿಷ್ಟ ಪ್ರಕಾಶಕ ಪ್ರಶಸ್ತಿ', 'ಆಳ್ವಾ ನುಡಿಸಿರಿ' ಪ್ರಶಸ್ತಿ, 'ಕನಕದಾಸ ಪ್ರಶಸ್ತಿ', ಕನ್ನಡ ಪುಸ್ತಕ ಪ್ರಾಧಿಕಾರದ 2007 ರ 'ಅತ್ಯುತ್ತಮ ಪ್ರಕಾಶನ' ಪ್ರಶಸ್ತಿ, ಕನ್ನಡ ಸಾಹಿತ್ಯ ಪರಿಷತ್ತಿನ 'ಅತ್ಯುತ್ತಮ ಪ್ರಕಾಶನ ಸಂಸ್ಥೆ' ಹೀಗೆ ಅನೇಕ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.

ಧಾರವಾಡ ಜಿಲ್ಲೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರೂ ಆಗಿದ್ದರು.

## ಉತ್ತಮ ಮೌಲ್ಯಗಳ ಬೆಳವಣಿಗೆಗೆ ಎನ್‌ಎಸ್‌ಎಸ್ ವೇದಿಕೆಯಾಗಿದೆ: ಬಸವರಾಜ ಡುಗ್ಗಿ

**ಬಾಗಲಕೋಟೆ :** ಎನ್.ಎಸ್. ಎಸ್. ಒಂದು ಸಾಮಾಜಿಕ ಕಳಕಳಿಯ ಕಾರ್ಯಕ್ರಮವಾಗಿದ್ದು ಸಾಮಾಜಿಕ ಹೊಸ ಮಾಹಿತಿಗಳನ್ನು ತಡೆದ ಹಾಕುವಲ್ಲಿಉತ್ತಮಗುಣಮಟ್ಟದ ಶಿಕ್ಷಣದ ಭಾಗವಾಗಿದೆ. ಅಲ್ಲದೆ ಏನ್ ಎಸ್ ಎಸ್ ನಿಂದ ನಾಯಕತ್ವ ಬೆಳವಣಿಗೆಗೆ ಉತ್ತಮ ವೇದಿಕೆಯಾಗಿದೆ ಮತ್ತು ಇದರಿಂದ ಉತ್ತಮ ಮೌಲ್ಯಗಳ ಬೆಳವಣಿಗೆ ಸಾಧ್ಯವಾಗುವ ವೇದಿಕೆಯಾಗಿದೆ ಎಂದು ಎನ್‌ಎಸ್‌ಎಸ್ ಉದ್ಘಾಟನಾ ಸಮಾರಂಭದಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯರಾದ ಎಸ್ ಆರ್ ಸಬರದ ಮಾತನಾಡಿ ಜೀವನದ ಅತ್ಯುತ್ತಮ ಭಾಗವಾಗಿ ಏನ್ ಎಸ್ ಎಸ್ ಕಾರ್ಯ ನಿರ್ವಹಿಸುತ್ತಿದೆ ಅದನ್ನು ತಮ್ಮ ಜೀವನದಲ್ಲಿ ಅಳವಡಿಸಿಸದುಪಯೋಗ ಪಡೆದುಕೊಳ್ಳಬೇಕೆಂದು ವಿದ್ಯಾರ್ಥಿಗಳಿಗೆ ತಿಳಿಹೇಳಿದರು.



ನಗರದ ಬಿವಿಬಿ ಸಂಘದ ಬಸವೇಶ್ವರ ವಿಜ್ಞಾನ ಮಹಾವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆ ಘಟಕ 1 ಮತ್ತು 2ಮತ್ತು ಐಕ್ಯೂಎಸಿ ವತಿಯಿಂದ ಕಿರಸೂರು ಗ್ರಾಮದಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ಸೇವಾ ಯೋಜನೆ ವಾರ್ಷಿಕ ವಿಶೇಷ ಘಟಕದ ಉದ್ಘಾಟನಾ ಸಮಾರಂಭದಲ್ಲಿ ಡಾ. ಡಿ. ಎಸ್. ಲಮಾಣಿ, ಐಕ್ಯೂಎಸಿ ಸಂಯೋಜಕರು,ಡಾ. ಶ್ರೀಮತಿ ಎಸ್. ಆರ್. ಕಲಾದಗಿ, ವಿದ್ಯಾರ್ಥಿ ಕಲ್ಯಾಣಾಧಿಕಾರಿ,ಡಾ.ಎ.ಎಮ್.ಸತ್ಯನಾಯಕ್, ರಾಷ್ಟ್ರೀಯ ಸೇವಾ ಯೋಜನೆ ಘಟಕ 1ರ ಕಾರ್ಯಕ್ರಮಾಧಿಕಾರಿಗಳಾದ ಶ್ರೀ. ಶಿವಾನಂದ ಶಿವನಗುತ್ತಿ, ಘಟಕ-2ರ ಕಾರ್ಯಕ್ರಮಾಧಿಕಾರಿ ಶ್ರೀ ಎಸ್. ಕೆ. ಜಹಗೀದಾರ, ಎನ್ ಎನ್ ಎಸ್ ಘಟಕದ ಸದಸ್ಯರು, ಸ್ವಯಂ ಸೇವಕರು, ಕಾಲೇಜಿನ ವಿವಿಧ ವಿಭಾಗದ ಮುಖ್ಯಸ್ಥರು, ವಿದ್ಯಾರ್ಥಿಗಳು,ಮಹಾವಿದ್ಯಾಲಯದ ಬೋಧಕ ಬೋಧಕೇತರ ಸಿಬ್ಬಂದಿಗಳು ಹಾಜರಿದ್ದರು. ಸ್ವಯಂಸೇವಕರಾದ ಕು. ಬಸವರಾಜ್ ಹಳ್ಳಿಕೇರಿ ನಿರೂಪಿಸಿ, ಕು. ಶಿವಾನಂದ ಮಡಿವಾಳರ ಪ್ರಾರ್ಥಿಸಿದರು ಮತ್ತುಘಟಕ 1ರ ಕಾರ್ಯಕ್ರಮಾಧಿಕಾರಿಗಳಾದ ಶ್ರೀ. ಶಿವಾನಂದ ಶಿವನಗುತ್ತಿ ಸ್ವಾಗತಿಸಿ, ಪರಿಚಯಿಸಿದರು. ಕು. ಶಿವಾನಂದ ಮಡಿವಾಳರ ವಂದಿಸಿದರು.

## ಕಾನೂನು ಪಾಲನೆ, ಪ್ರತಿಯೊಬ್ಬರ ಹೊಣೆ: ಜಹಾಗೀರದಾರ

**ವಿಜಯಪುರ :** ಆದರ್ಶ ನಗರದ ಎಕ್ಸಲಂಟ ಕನ್ನಡಹಾಗೂ ಆಂಗ್ಲಮಾಧ್ಯಮ ಶಾಲೆಯಲ್ಲಿ ಕಾನೂನು ಅರಿವುಕಾರ್ಯಕ್ರಮಜರುಗಿತು. ಈ ಕಾರ್ಯಕ್ರಮದಲ್ಲಿ ಮುಖ್ಯಅಥಿತಿಗಳಾಗಿ ಭಾಗವಹಿಸಿದ್ದ ಗಾಂಧಿಚೌಕ ಮಹಿಳಾ ಪೋಲಿಸ್ ಸ್ಟೇಶನ ಎಎಸ್‌ಐ ಶ್ರೀ ಎಂ .ಎಚ್‌ಜಹಾಗೀರದಾರಅವರು ಮಾತನಾಡಿ ಪ್ರತಿಯೊಬ್ಬರಿಗೂದೇಶದ ಕಾನೂನುಗಳ ಬಗ್ಗೆ ಅರಿವುಇರಬೇಕಾದುದುಅತಿಅಗತ್ಯ.ಮುಖ್ಯವಾಗಿ ಯುವ ಜನತೆ ತಮ್ಮದೆಯಾದ ರಕ್ಷಣಾತ್ಮಕ ನೀಲುವುಗಳನ್ನು ಹೊಂದಿರುವಪ್ರತಿಕಾನೂನುಗಳನ್ನು ಅತ್ಯಂತಗೌರವದಿಂದಕಂಡು ಪಾಲಿಸಿಕೊಂಡು ಬರಬೇಕು. ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ನಿಷೇಧ ಕಾನೂನು(ಪೋಕ್ಸೋ) 2012 ಮತ್ತು ಬಾಲ್ಯವಿವಾಹ ನಿಷೇಧ ಕಾನೂನು 2006 ಈ ಕಾನೂನುಗಳ ಮಹತ್ವವನ್ನುಅರಿತುಕಡಿಮೆವಯಸ್ಸಿನಲ್ಲಿ ಮದುವೆಮತ್ತುದೌರ್ಜನ್ಯಗಳನ್ನುತಡೆಗಟ್ಟುವಮೂಲಕಮಕ್ಕಳಿಂದಾಗುವ ಅಪರಾಧಗಳನ್ನು ತಡೆಗಟ್ಟಬಹುದು. 18 ವರ್ಷಕ್ಕಿಂತಕಡಿಮೆ ವಯಸ್ಸಿನ ಮಕ್ಕಳ ಮೇಲೆ ಆಗುವ ದೌರ್ಜನ್ಯಗಳನ್ನು ಮಕ್ಕಳ ಸಹಾಯವಾಣಿ 1098 ಕ್ಕೆ ಮಾಹಿತಿ ನೀಡುವ ಮೂಲಕ ಸಂಭವಿಸಲಿರುವಅಪಾಯವನ್ನುತಡೆಗಟ್ಟಬಹುದು.ಅಲ್ಲದೆತುರ್ತು ಸೇವೆಗಾಗಿ ದಿನದ 24 ಗಂಟೆಗಳ ಕಾಲ ಕಾರ್ಯನಿರ್ವಹಿಸುತ್ತಿರುವ 112 ಕ್ಕೆ ಕರೆಮಾಡಬಹುದು.ಈ ಎಲ್ಲ ಸವಲತ್ತುಗಳು ಸಮುದಾಯದ ಮಧ್ಯೆ ಸಂಭವಿಸಬಹುದಾದ ಕಾನೂನು ಉಲ್ಲಂಘನೆ ಮತ್ತು ಅಪರಾಧಗಳನ್ನು ತಡೆಗಟ್ಟಿ ಸುಂದರ ಮತ್ತುಸಮೃದ್ಧ ಸಮಾಜವನ್ನು ನಿರ್ಮಿಸುವಉದ್ದೇಶ ಹೊಂದಿವೆ ಎಂದರು.

ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ಶಾಲೆಯ ಮುಖ್ಯ ಗುರುಗಳಾದ ಎಮ್.ಐ. ಬಿರಾದಾರ ಅವರು ನಿಯಮಗಳು ಇರುವುದುಎಲ್ಲರ ಒಳಿತಿಗಾಗಿ ಅವುಗಳ ಪಾಲನೆ ಮತ್ತುರಕ್ಷಣೆ ನಮ್ಮೆಲ್ಲರ ಹೊಣೆ.ದೇಶದ ಕಾನೂನುಗಳನ್ನು ಅತ್ಯಂತಜಾಗರೂತೆಯಿಂದ ಪಾಲಿಸಿ ರಾಷ್ಟ್ರದ ಸತ್ಪ್ರಜೆಗಳಾಗೋಣ ಎಂದರು. ಕಾರ್ಯಕ್ರಮದಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀ ರಾಜಶೇಖರ ಕೌಲಗಿ ಅವರು ಮಾತನಾಡಿಅಧಿಕಾರಿಗಳು ನೀಡಿದ ಮಾಹಿತಿಯಂತೆ ನಾವೆಲ್ಲರೂ ಕಾನೂನುಗಳನ್ನು ಗೌರವಿಸೋಣ ಮತ್ತು ಪಾಲಿಸೋಣ.ಕಾನೂನುಗಳಿಗೆ ಗೌರವ ನೀಡುವವನು ಮಾತ್ರದೇಶದಯೋಗ್ಯನಾಗರಿಕನಾಗಬಲ್ಲನು.ಈ ಸಭೆಯಲ್ಲಿನಎಲ್ಲ ಮಾಹಿತಿಯನ್ನು ನಿಮ್ಮ ನಿಮ್ಮ ವಾಸಸ್ಥಳಗಳಲ್ಲಿ ಪ್ರಸಾರ ಮಾಡಿರಿಎಂದರು. ವಿದ್ಯಾರ್ಥಿಗಳುಚಾಲ್ತಿಯಲ್ಲಿರುವ ವಿವಿಧ ಕಾನೂನುಗಳ ಇತಿಮಿತಿಗಳ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸಿ ಸಂದೇಹ ಪರಿಹರಿಸಿಕೊಂಡರು. ಕಾರ್ಯಕ್ರಮದಲ್ಲಿ ಶ್ರೀಮತಿ ಸಾವಿತ್ರಿ (ಪಿಸಿ) , ಶ್ರೀಮತಿ ಉಮಾ ಶಹಬಾದೆ, ಶ್ರೀ ಪಿ. ಬಿ. ಖೇಡಗಿ ಹಾಗೂ ಸಿಬ್ಬಂದಿ ಮತ್ತು ಮಕ್ಕಳು ಭಾಗವಹಿಸಿದ್ದರು.



## ಹದಗೆಟ್ಟು ಹಳ್ಳ ಹಿಡಿದು ಹಾಳಗಿರುವ ಭಾಗ್ಯನಗರದ ರಸ್ತೆಗಳು: ಶರಣಬಸಪ್ಪ ದಾನಕ್ಕೈ



**ಕೊಪ್ಪಳ :** ತಾಲೂಕಿನ ಭಾಗ್ಯನಗರದ ರಸ್ತೆಗಳು ಹದೆಗೆಟ್ಟು ಹಳ್ಳ ಹಿಡಿದಿವೆ, ಮಳೆಯಿಂದ ರಸ್ತೆಗಳು ತಗ್ಗು ಗುಂಡಿಗಳಿಂದ ಕೆರೆಗಳಂತೆ ನಿರ್ಮಾಣವಾಗಿವೆ ಮತ್ತು ಕೃಷಿ ಹೊಂಡಗಳಾಗಿ ರಾರಾಜಿಸುತ್ತಿವೆ ಇದರಿಂದ ದ್ವಿ ಚಕ್ರ ವಾಹನ ಸವಾರರು, ಪಾದಚಾರಿಗಳಿಗೆ ,ಆಟೋ ಚಾಲಕರಿಗೆ, ಇತರ ವಾಹನ ಸವಾರರು ಇವರಿಗೆ , ರೈತ ವರ್ಗದವರಿಗೆ, ಪ್ರಯಾಣಿಕರಿಗೆ ತೊಂದರೆಯಾಗುತ್ತದೆ ಸಂಬಂದಿಸಿದ ಅಧಿಕಾರಿಗಳು, ಜನಪ್ರತಿನಿಧಿಗಳು ಸುಗಮ ರಸ್ತೆಗಳಿಗೆ ಸ್ಪಂದಿಸಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗು ಹಸಿರು ಸೇನೆ ವಾಸುದೇವ ಮೇಟಿ ಬಣದ ಯಲಬುರ್ಗಾ ತಾಲೂಕು ಅಧ್ಯಕ್ಷ ಶರಣಬಸಪ್ಪ ದಾನಕ್ಕೈ ಅವರು ಸಮಸ್ಯೆಗೆ ಸ್ಪಂದಿಸುವ ಕಾರ್ಯ ಮಾಡಬೇಕು ಎಂದು ಒತ್ತಾಯಿಸಿದ್ದಾರೆ. ಭಾಗ್ಯನಗರದ ತಾಯಮ್ಮ ದೇವಸ್ಥಾನ ಹಾಗು ಸಾಯಿಬಾಬ ಮಂದಿರ ಮುಂದೆ ಇರುವ ರೈಲು ಬ್ರೀಜ್ ಮುಂಭಾಗದಲ್ಕಿ ದೊಡ್ಡದಾದ ಕಂದಕಗಳು ನಿರ್ಮಾಣವಾಗಿವೆ ,ಈ ಮಾರ್ಗವಾಗಿ ವಿವಿಧ ಕಲ್ಯಾಣ ಮಂಟಪಗಳು, ದೇವಸ್ಥಾನಗಳು ಇರುವದರಿಂದ ಜನದಟ್ಟನೆ ಪ್ರಯಾಣ ಹೆಚ್ಚಿನ ಪ್ರಮಾಣದಲ್ಲಿ ಇರುತ್ತದೆ, ಹಗಲಿನಲ್ಲಿ ರಸ್ತೆಗಳ ಮೇಲೆ ನೀರು ನಿಂತರೆ ಕಾಣುವುದಿಲ್ಲ ಆದರೆ ರಾತ್ರಿಯಾದರೆ ಮರಣ ಮೃದಂಗ ಸಂಭವಿಸಬಹುದು ಆದಷ್ಟೂಬೇಗ ಕಾರ್ಯಪ್ರವೃತರಾಗಬೇಕು ಎಂದು ರೈತ ಮುಖಂಡ ಶರಣಬಸಪ್ಪ ದಾನಕ್ಕೈ ಒತ್ತಾಯಿಸಿದ್ದಾರೆ.

## ಬಳ್ಳಾರಿ ಮಹಾನಗರ ಪಾಲಿಕೆ: ವಸತಿ ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನ

**ಬಳ್ಳಾರಿ :** ಬಳ್ಳಾರಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ವಸತಿ ಸೌಲಭ್ಯ ಪಡೆಯಲು ಇಚ್ಛಿಸುವ ಸ್ವಂತ ಮನೆ ಇಲ್ಲದೇ ಇರುವ ವಸತಿ ರಹಿತರಿಂದ ವಸತಿ ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

ಕೇಂದ್ರ ಸರ್ಕಾರದ ಪಿಎಂಎವೈ, ಹೆಚ್‌ಎಫ್‌ಎ ಹಾಗೂ ಇತರೆ ಯೋಜನೆಯಡಿ ಬಳ್ಳಾರಿ ನಗರದ ಮುಂಡರಗಿ ಆಶ್ರಯ ಬಡಾವಣೆಯಲ್ಲಿ ಜಿ+2 ಮಾದರಿಯ 5616 ಮನೆಗಳ ನಿರ್ಮಾಣ ಯೋಜನೆ ಅನುಷ್ಠಾನಗೊಳಿಸಲಾಗುತ್ತಿದೆ.

ಫಲಾನುಭವಿಗಳಾಗಲು ವಸತಿ ರಹಿತರಾಗಿರಬೇಕು. ಬಳ್ಳಾರಿ ನಗರದ ನಿವಾಸಿಗಳಾಗಿರಬೇಕು. ವಾರ್ಷಿಕ ಆದಾಯ ರೂ.3 ಲಕ್ಷ ಮೀರಿರಬಾರದು. ಫಲಾನುಭವಿ ವಂತಿಕೆ ಪಾವತಿಸುವುದು ಹಾಗೂ ಬ್ಯಾಂಕ್ ಸಾಲ ಮರುಪಾವತಿ ಮಾಡಲು ಬದ್ಧರಾಗಿರಬೇಕು. ಫಲಾನುಭವಿಯು ಭರಿಸಬೇಕಾದ ವಂತಿಕೆ ಮೊತ್ತದ ವಿವರ:

**ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ:**
ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಹಾಯಧನ-3,30,000 ರೂ., ಫಲಾನುಭವಿಯು ಪ್ರಸುತ್ತ ಪಾವತಿಸಬೇಕಾದ ವಂತಿಕೆ ಮೊತ್ತ-42,000 ರೂ.,ಫಲಾನುಭವಿಯುಮನೆಸ್ವಾಧೀನಸಂದರ್ಭದಲ್ಲಿ ಪಾವತಿಸಬೇಕಾದ ವಂತಿಕೆ ಮೊತ್ತ-2,90,000 ರೂ., ಒಟ್ಟು ಘಟಕ ವೆಚ್ಚ (ಪರಿಷ್ಕೃತ)- 6,62,000 ರೂ.



**ಅಲ್ಪ ಸಂಖ್ಯಾತ ಮತ್ತು ಇತರೆ:**
ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಹಾಯಧನ-2,70,000 ರೂ., ಫಲಾನುಭವಿಯು ಪ್ರಸುತ್ತ ಪಾವತಿಸಬೇಕಾದ ವಂತಿಕೆ ಮೊತ್ತ-1,02,000 ರೂ.,ಫಲಾನುಭವಿಯುಮನೆಸ್ವಾಧೀನಸಂದರ್ಭದಲ್ಲಿ ಪಾವತಿಸಬೇಕಾದ ವಂತಿಕೆ ಮೊತ್ತ-2,90,000 ರೂ., ಒಟ್ಟು ಘಟಕ ವೆಚ್ಚ (ಪರಿಷ್ಕೃತ)- 6,62,000 ರೂ. ಪಾವತಿಸಬೇಕು.

ಈ ಮೇಲ್ಕಂಡ ಅರ್ಹತೆಯ ಮಾನದಂಡ ಹಾಗೂ ಫಲಾನುಭವಿ ವಂತಿಕೆ ಪಾವತಿಸಲು ಶಕ್ತರಾಗಿರುವ ಹಾಗೂ ಆಸಕ್ತಿ ಹೊಂದಿರುವ ಕುಟುಂಬಗಳು ಕೂಡಲೇ ನಿಗಧಿತ ನಮೂನೆಯ ಅರ್ಜಿ ಪಡೆದು ಅವಶ್ಯಕ ಹಾಗೂ ಅಗತ್ಯ ದಾಖಲೆಗಳೊಂದಿಗೆ ಮಹಾನಗರ ಪಾಲಿಕೆಯ ಹಳೆಯ ಕಚೇರಿಯ ಆಶ್ರಯ ಶಾಖೆಗೆ ಭೇಟಿ ನೀಡಬಹುದು ಎಂದು ಮಹಾನಗರ ಪಾಲಿಕೆ ಕಚೇರಿಯು ಪ್ರಕಟಣೆಯಲ್ಲಿ ತಿಳಿಸಿದೆ.

"SIHI KAHI" Kannada Daily Morning, Editor, Owner, Publisher, Printer by MARUTI BASAVANTAPPA HOASAMANI Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at SUDIN PRINTERS, Sector No. 33, Shop No. 38 & 40, Opp. Ambedkar Bhavan, NAVANAGAR, BAGALKOT-587 101. Dist : Bagalkot, Karnataka State

Designed by MKG-9535762618